Mr. SPEAKER.—The question is :

"That the University of Agricultural Sciences Bill, 1963 as amended, be passed."

The motion was adopted.

Mr. SPEAKER.—The House will now rise and meet after half-an-hour.

The House adjourned for Recess at Twenty-five Minutes past Ten of the Clock and reassembled at Fifty-five minutes past Ten of the Clock.

[MR. SPEAKER in the Chair.]

ಶ್ರೀ ಎಸ್. ಗೋಪಾಲ ಗೌಡ.—ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸುವುದಕ್ಕೆ ಮುಂಚೆ ನಾನು ವೈಯಕ್ತಿಕವಾಗಿ ವಿವರಣೆಯನ್ನು ಕೊಡಬೇಕಾಗಿದೆ.

Mr. SPEAKER.—Not now.

Mysore Municipalities Bill, 1962.

Motion to consider

Sri K. PUTTASWAMY (Minister for Municipal Administration).—Sir, I move :

"That the Mysore Municipalities Bill, 1962 be taken into consideration."

Mr. SPEAKER.—Motion moved :

"That the Mysore Municipalities Bill, 1962 be taken into consideration.

ಶ್ರೀ ಎಸ್. ಗೋಪಾಲ ಗೌಡ.—ಏಕೆ ಸ್ವಾಮಿ ; ವಿಷಾದ ವ್ಯಕ್ತಪಡಿಸಲು ನಾನು ಎದ್ದು ನಿಂತಿದ್ದೇನೆ. ಯಾವಾಗ ಸ್ವಾಮಿ......

Mr. SPEAKER.—Whatever is not on the agenda, cannot be taken up, unless the Hon'ble Member tells me before I come to dais.

ಶ್ರೀ ಎಸ್. ಗೋಪಾಲ ಗೌಡ.—ಈಗ ಅವಕಾಶ ಕೊಡಿ, ಸ್ವಾಮಿ.

Mr. SPEAKER.—I have already expressed it very clearly.

ಶ್ರೀ ಎಸ್. ಗೋಪಾಲ ಗೌಡ.—ಈಗ ನಾನು ಹೇಳುವುದನ್ನು ಕೇಳಿ, ಸ್ವಾಮಿ, ಸ್ವಲ್ಪ.

Mr. SPEAKER.—I have already expressed myself. That which is not in the agenda will not be permitted to be taken up here. The member may meet me and tell me what it is; I will apply my mind.

Sri K. PUTTASWAMY.—Sir, this Bill is coming before the Assembly......

ಶ್ರೀ ಎಸ್. ಗೋಪಾಲ ಗೌಡ.—ತಾವು ಈಗತಾನೇ ತಿಳಿಸಿದಿರಿ ; ವಿಷಾದ ವ್ಯಕ್ತಪಡಿಸಬೇಕು, ಇಲ್ಲದೆ ಹೋದರೆ ಸಾಧ್ಯವಿಲ್ಲ ಎಂದು.

Mr. SPEAKER.—Even that matter will have to be discussed with me outside and not now.

ಶ್ರೀ ಎಸ್. ಗೋಪಾಲ ಗೌಡ.—ನಾಳೆ ಭಾನುವಾರ ಇದೆ. ಆದ್ದರಿಂದ ಈ ವಿಷಯವನ್ನು ತಾವು ಪುನಃ ಪರಿಶೀಲನೆ ಮಾಡಿ, ನನಗೆ ಅವಕಾಶಕೊಡುವುದು ಒಳ್ಳೆಯದು.

Mr. SPEAKER.—Yes; The member has made that request; I will consider. The Minister will go on now.

11-00 A. M.

Sri K. PUTTASWAMY.—Sir, this Bill seeks to replace seven different enactments which are governing municipal administration in various parts of the State. In this Bill the principles governing municipal administration and town municipalities in the State have been taken in toto. There is only one new feature in this Bill, that is, Chapter 9 which seeks to make a provision for appointment of Improvement Boards and their proper functioning. It has been noticed in the municipal administration of several towns where there are no Improvement Boards, that the development of the town proceeds in a haphazarded manner. With a view to make development orderly, some of the provisions of City Improvement Trust Board Acts of Mysore and Bangalore are included. If this Bill is passed into law, it not only provides for uniformity throughout the State in the matter of municipal administration but will also be conducive to the proper development of the towns. I commend this Bill for the concurrence of the House.

Mr. SPEAKER.—There are 7 hours allotted for this Bill. I would like to know how many are desirous of participating. If it is possible for the whips of the parties and a few members to meet together and give me some agreed list, I am prepared to call them and discuss with them and finalise it. The work will thus be co-ordinated. I will now allow the debate to commence. Meanwhile the whips of the recognised parties and one or two others may agree among themselves. Otherwise I will give chances as I choose and members may say that someone has been called and they have not been called. This procedure is adopted elsewhere also.

Sri ANNA RAO GANAMUKHI.—Even if the whips give a list, the Chair will have some discretion to exercise its own judgment.

Mr. SPEAKER.—I never surrender my judgment to anybody.

Sri ANNA RAO GANAMUKHI.—My suggestion is that you may call members according to your own judgment.

Mr. SPEAKER.—At the same time rules are rules. If there are whips, members should not try to get over the whips and send me slips. If they are dissatisfied there is the leader to whom they could go and complain. Normally I will not take any slips directly from the members.

Sri ANNA RAO GANAMUKHI.—My point was that it was not incumbent upon the Chair to strictly adhere to the list.

Mr. SPEAKER.—I have said that once. It is not a function which I can delegate. It is not possible at all for me to do that. Now, shall I fix a time limit? What is the sense of the House?

Sri S. SIVAPPA.—We have two days. No time limit would be necessary.

Mr. SPEAKER.—Afterwards members may complain that they got less time and somebody got more time.

Sri S. SIVAPPA.—Let us see how the debate progresses.

†ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ನಗರ).—ಅಧ್ಯಕ್ಷರೇ, ಮೈಸೂರು ರಾಜ್ಯದ ಪುರಸಭೆಗಳಿಗೆ ಸಂಬಂಧಪಟ್ಟ ವಿಧೇಯಕದ ಬಗ್ಗೆ ಮಾತನಾಡುತ್ತ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ನಾವು ಇದುವರೆಗೂ ಕೂಡ ನಮ್ಮ ಸಂಸ್ಥಾನದಲ್ಲಿ 1933ನೇ ಇಸವಿಯಿಂದಲೂ ಈ ವಿಧೇಯಕವನ್ನು ಜಾರಿಯಲ್ಲಿಟ್ಟುಕೊಂಡು ಇದ್ದೇವೆ. ಹಾಗೂ ಇತರ ಭಾಗಗಳಿಂದ ಬಂದಿರತಕ್ಕ 6 ಸಂಸ್ಥಾನಗಳು ಮತ್ತು ಇದೂ ಸೇರಿ ಒಟ್ಟು 7 ಸಂಸ್ಥಾನಗಳಿಗೂ ಕೂಡ ಒಂದೇ ಒಂದು ವಿಧೇಯಕವನ್ನು ಮಂಡಿಸಿದ್ದೀರಿ. ಇದರಲ್ಲಿ ಮೊದಲು 14 Chapterಗಳು ಇದ್ದುದು ಈಗ 16 Chapterಗಳಾಗಿವೆ. ಜೊತೆಗೆ 254 ಸೆಕ್ಷನ್ ಇದ್ದದ್ದು ಈಗ 356 ಸೆಕ್ಷನ್‌ಗಳಾಗಿವೆ. ಇದೆಲ್ಲಾ ತಿರುವಿ ನೋಡಿದರೆ ಒಟ್ಟಿನಲ್ಲಿ ಎಲ್ಲಾ ಮಕ್ಕೀಕಾಮಕ್ಕೀ, ಹಿಂದೆ ಏನಿತ್ತೋ ಅದನ್ನೇ ಈ ಒಂದು ಆಕ್ಟ್‌ನಲ್ಲಿ ಮತ್ತೇ ಸೇರಿಸಿದ್ದೀರಿ ಎನ್ನುವುದು ಚೆನ್ನಾಗಿ ಅರ್ಥವಾಗುತ್ತದೆ. ಈ ವಿಧೇಯಕ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಮಾರ್ಪಾಡಾಗಿಲ್ಲ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಲ್ಲಿರತಕ್ಕ ಹಾಗೂ ಈ ಪೌರಸಭೆಯ ಮಂತ್ರಿಗಳಾದವರು ಬಹಳ ದಿವಸದಿಂದ ರಾಜಕೀಯದಲ್ಲಿ ಇದ್ದಾರೆ. ಮುಖ್ಯವಾಗಿ ಅದರಲ್ಲೂ ಅವರು ಮೈಸೂರು ಪೌರಸಭೆಯಲ್ಲಿ ಎರಡು ವರ್ಷಗಳ ಕಾಲ ಪುರಸಭಾಧ್ಯಕ್ಷರಾಗಿದ್ದು ಚೆನ್ನಾಗಿ ಕೆಲಸಮಾಡಿ ಒಳ್ಳೆಯ ಹೆಸರೂ ಕೂಡ ಗಳಿಸಿದ್ದಾರೆ. ಇಷ್ಟಾದರೂ ಕೂಡ ಇಂದಿನ ಕಾಲಕ್ಕೆ ತಕ್ಕಹಾಗೆ ಹಾಗೂ ಪ್ರಜಾಪ್ರಭುತ್ವಕ್ಕನುಗುಣವಾಗಿ ಏನೂ ಕಾನೂನು ಬರುತ್ತದೆ ಎಂದು ಆಶೆಯನ್ನಿಟ್ಟುಕೊಂಡಿದ್ದೆವು, ಅದು 7 ವರ್ಷ ಆದ ಮೇಲೆ ಏನು ನೋಡುತ್ತಾ ಇದ್ದೇವೆ ಎಂದರೆ ಇಂದಿನ ಆಕ್ಟ್ ಏನಿದೆ ಇದನ್ನು ತಿರುಗಿ ಹಿಂದಿದ್ದ ಸ್ಥಿತಿಯಲ್ಲಿಯೇ ತಂದಿದ್ದೀರೇ ಹೊರತು ಪ್ರಜಾಪ್ರಭುತ್ವಕ್ಕನುಗುಣವಾಗಿ ಯಾವ ಒಂದು ಕಾಯಿದೆಯೂ ಬರದೇ ಇರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತ ಕಳೆದ ವರ್ಷ ಒತ್ತಾಯ ಮಾಡಿದ್ದಕ್ಕೆ ಈಗ ಇಷ್ಟು ಜಾಗ್ರತೆ ಬಂದಿರುವುದು ಒಂದೇ ಒಂದು ಸಂತೋಷ, 6 ತಿಂಗಳಿನಲ್ಲಿ ಆಕ್ಟ್ ಜಾರಿಗೆ ತರುವುದಕ್ಕೆ ಪ್ರಯತ್ನಪಟ್ಟರಲ್ಲಾ ಎಂದು ಸಂತೋಷವು ಕೂಡ ಮನಸ್ಸಿನಲ್ಲಿ ಬರುತ್ತಾ ಇದೆ. 1963ನೇ ಇಸವಿಯ ಈ ಆಕ್ಟ್‌ನಲ್ಲೂ ಕೂಡ ಕಿಲೋ ಎನ್ನುವುದನ್ನು ನಮೂದಿಸದೇ ಮಣ ಎಂಬ ಧಾಟಿಯಲ್ಲೇ ನಮೂದಿಸಿದ್ದೀರಿ. ನಾವು ತಿಳಿದುಕೊಂಡಿದ್ದೆವು. ನೀವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಜನ 1935ನೇ ಇಸವಿಯಲ್ಲಿ ಇಂಗ್ಲೀಷ್‌ನವರು ಮೊದಲು ಇದ್ದಂಥ ಕಾಲದಲ್ಲಿ ಇದ್ದ ಕಾನೂನಿನ ಧಾಟಿಯಲ್ಲೇ ಈ ಕಾನೂನನ್ನು ರಚಿಸಿದ್ದೀರಲ್ಲ ಎಂದು ಒತ್ತಿ ಒತ್ತಿ ಹೇಳಬೇಕಾದ ಸಂದರ್ಭ ಒದಗಿದೆ. ಡೆಪ್ಯೂಟಿ ಕಮೀಷನರಿಗೆ ಇದ್ದಂಥ ಅಧಿಕಾರ ಪುನಃ ಅದನ್ನು continue ಮಾಡುತ್ತಾ ಇದ್ದೀರಿ. ತಮಗೆ ಅನುಭವ ಇದೆ, ಗೊತ್ತಿದೆ. ಹಿಂದೆ ಮೈಸೂರು ಪುರಸಭಾಧ್ಯಕ್ಷರಾಗಿದ್ದಿರಿ. ಪುರಸಭೆಯಲ್ಲಿ ಗಲಾಟೆ ಆದಾಗ ಅಧ್ಯಕ್ಷರ ಅಧಿಕಾರ, ಡೆಪ್ಯೂಟಿ ಕಮೀಷನರ ಅಧಿಕಾರ ಒಂದೇ ಆಗಿ, ಅಧ್ಯಕ್ಷರಿಗಿರಬೇಕಾದ ಅಧಿಕಾರ ಡೆಪ್ಯೂಟಿ ಕಮೀಷನರ ಕೈಗೆ ಹೋಗುತ್ತದೆಯಲ್ಲಾ ಎಂದು ವಿಷಾದಪಟ್ಟಿದ್ದು ತಮಗೆ ಗೊತ್ತಿದೆ ಇದೆಲ್ಲಾ ಅನುಭವ ವಿದ್ದರೂ ಕೂಡ ಅದೇ ಕಾನೂನನ್ನು ತಾವು ಮಂತ್ರಿಗಳಾಗಿ ಬಂದ ಮೇಲೂ ಸಹ ತಂದಿರುವುದಕ್ಕೆ ಬಹಳ ವಿಷಾದಪಡಬೇಕಾಗಿದೆ. ಯಾವುದೇ ಒಂದು ಕಾನೂನು ತೆಗೆದುಕೊಂಡರೂ ಕೂಡ, ಪೌರ ಸಭೆಯಲ್ಲಿ ಬಹಳ ಕೇಸುಗಳನ್ನು ಸೋಲುತ್ತಾ ಇದ್ದೇವೆ ಎಂದು ತಿಳಿದಿದ್ದೇವೆ. ತಿರುಗಿ ಇಂಥಾ ಒಂದು ಮಸೂದೆಯನ್ನು ಮಂಡಿಸಿರುವುದಕ್ಕೆ ಬಹಳ ವಿಷಾದಪಡಬೇಕಾಗಿದೆ. ಇಲ್ಲಿ ಕೌನ್ಸಿಲರ್ಸ್ ಲಿಸ್ಟ್ ಮಾಡಿದ್ದೀರಿ 20 ಸಾವಿರ ಜನಸಂಖ್ಯೆ ಇರತಕ್ಕ ಒಂದು ಪುರಸಭೆಗೆ 15 ಜನ ಕೌನ್ಸಿಲರ್ಸ್ 20ರಿಂದ 30 ಸಾವಿರದವರೆಗೆ 19 ಜನ, 30ರಿಂದ 40 ಸಾವಿರದವರೆಗೆ 21 ಜನ, 40ರಿಂದ 50 ಸಾವಿರದವರೆಗೆ 25 ಜನ, 50ರಿಂದ ಒಂದ ಲಕ್ಷದವರೆಗೆ 27 ಜನ, ಒಂದು ಲಕ್ಷಕ್ಕೆ ಮೇಲ್ಪಟ್ಟು 31 ಜನ ಕೌನ್ಸಿಲರ್ಸ್ ಇರಬೇಕೆಂದು ಈ ಆಕ್ಟ್‌ನಲ್ಲಿ ನಮೂದಿಸಿದ್ದೀರಿ. ಆದರೆ ಹಿಂದಿನ ಆಕ್ಟ್‌ನಲ್ಲಿ ಬೇರೆ ರೀತಿಯಲ್ಲಿತ್ತು. ಪುರಸಭೆಯವರು ಎಷ್ಟು ಜನ ಇರಬೇಕೆಂದು ಶಿಫಾರಸು ಮಾಡುತ್ತಾರೆ ಅದನ್ನು ಸರ್ಕಾರ ಒಪ್ಪುವ ರೀತಿಯಲ್ಲಿ ಜಾರಿಯಲ್ಲಿತ್ತು. ಇಲ್ಲಿ ಒಂದು ಲಕ್ಷಕ್ಕೆ ಮೇಲ್ಪಟ್ಟ ಕಾರ್ಪೊರೇಷನ್‌ಗೆ ಯಾವ ರೀತಿ ಇರಬೇಕೆನ್ನುವುದನ್ನು ನಮೂದಿಸದೇ ಇರುವುದಕ್ಕಾಗಿ ಬಹಳ ವಿಷಾದ ವ್ಯಕ್ತಪಡಿಸಬೇಕಾಗಿದೆ. ಒಂದು ಲಕ್ಷಕ್ಕೆ ಮೇಲ್ಪಟ್ಟು ಎಷ್ಟು ಜನ ಸಂಖ್ಯೆಯಿದ್ದರೂ ಕೂಡ 31 ಜನ ಕೌನ್ಸಿಲರ್ಸ್ ಇರಬೇಕೆಂದು ನಮೂದಿಸಿದ್ದೀರಿ. ಕಾರ್ಪೊರೇಷನ್ ಆಗಬೇಕಾದರೆ ಎಷ್ಟು ಜನಸಂಖ್ಯೆ ಇರಬೇಕೆಂಬುದನ್ನು ನಮೂದಿಸಿದ್ದರೆ ಬಹಳ ಪ್ರಯೋಜನವಾಗುತ್ತಿತ್ತು, ಅನುಕೂಲ

ವಾಗುತ್ತಿತ್ತು. ತಮಗೆ ಪೌರಸಭೆಗಳಿಂದ ಪದೇ ಪದೇ ಒತ್ತಾಯ ಬರತಕ್ಕ ಪರಿಸ್ಥಿತಿ ಒದಗುತ್ತಿರಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾರ್ಪೊರೇಷನ್ ಜನಸಂಖ್ಯೆ ಕೂಡ ಇಷ್ಟೇ ಇರಬೇಕೆಂದು ನಮೂದಿಸುವುದು ಬಹಳ ಒಳ್ಳೆಯದು ಎಂದು ನಾನಾದರೂ ತಿಳಿದುಕೊಂಡಿದ್ದೇನೆ.

ಹಾಗೂ ಮೈಸೂರು ಪೌರಸಭೆಯನ್ನು ಒಂದು ಕಾರ್ಪೊರೇಷನ್ ಮಾಡಬೇಕೆಂಬ ವಿಚಾರದಲ್ಲಿ ಹತ್ತಾರು ರೆಸಲ್ಯೂಷನ್‌ಗಳು ಬಂದು ಸರ್ಕಾರದಲ್ಲಿ ಬಿದ್ದಿರುತ್ತವೆ. ಆದರೆ ಅದನ್ನು ಇಲ್ಲಿಯವರೆಗೂ ಕಾರ್ಯಗತ ಮಾಡಿರುವುದಿಲ್ಲ. ಅದಕ್ಕಾಗಿ ನಾನು ತುಂಬಾ ವಿಷಾದಪಡುತ್ತೇನೆ.

ಇನ್ನು ಈಗ ಈ ಮಸೂದೆಯಲ್ಲಿ ಸೂಚಿಸಿರತಕ್ಕ ಕ್ಲಾಜು 123ಕ್ಕೂ ಹಿಂದಿನ ಆಕ್ಟಿನಲ್ಲಿದ್ದ 123ನೇ ಸೆಕ್ಷನ್ನಿಗೂ ಅಷ್ಟೇನೂ ವ್ಯತ್ಯಾಸವಿಲ್ಲ. ಈ ಹಿಂದೆ ಇದ್ದ ರೂಲ್ಸು ಪ್ರಕಾರ ಪ್ರತಿಯೊಬ್ಬ ವ್ಯಾಪಾರಿಯೂ ತಾನು ಮಾರಾಟಮಾಡತಕ್ಕ ಸಾಮಾನಿನ ಬಗ್ಗೆ ಆಕ್ಟ್ರಾಯಿ ಪಾವತಿ ಮಾಡಿದ ಬಗ್ಗೆ ಒಂದು ಲೈಸೆನ್ಸನ್ನು ಪಡೆದೇ ಆ ವ್ಯಾಪಾರ ಮಾಡಬೇಕೆಂಬ ಕಾನೂನಿತ್ತು. ಆದರೆ ಈ ಕಾನೂನು ಅಷ್ಟೇನೂ ಜಾರೀಲಿದ್ದಂತೆ ಕಂಡುಬರಲಿಲ್ಲ. ಆದರೆ ಈಗಲೂ ಅದೇ ರೀತಿ ಇದರಲ್ಲಿ ನಮೂದಿಸಲಾಗಿದೆ. ಇದರಿಂದ ಈಗ ಏನು ಒಂದು ಹೊಸ ತತ್ವವನ್ನು ಜಾರಿಗೆ ತಂದ ಹಾಗಾಯಿತು ? ಈ ವಿಚಾರವನ್ನು ಉತ್ತರ ಕೊಡುವಾಗ ಮಾನ್ಯ ಮಂತ್ರಿಗಳು ಸ್ವಲ್ಪ ವಿವರಿಸಿ ಹೇಳಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಈ ಮಸೂದೆಯಲ್ಲಿ ಪೌರಸಭಾಧ್ಯಕ್ಷರಿಗೇನು ಅಧಿಕಾರಗಳಿರುತ್ತವೆಂಬುದನ್ನು ಎಲ್ಲಿಯೂ ಸೂಚಿಸಿಲ್ಲ. ಈ ಪ್ರಜಾಪ್ರಭುತ್ವ ಯುಗದಲ್ಲಿ ಸಹ ಈ ಪ್ರಜಾಧಿಕಾರ ಸಂಸ್ಥೆಗಳಲ್ಲಿ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರಗಳಿರುತ್ತವೆ ಎಂಬುದನ್ನು ನಾವಿಂದು ಸ್ವಪ್ನದಲ್ಲಿ ಕಂಡ ಹಾಗಾಗಿದೆ! ಈ ಪ್ರಜಾಪ್ರಭುತ್ವ ಆಡಳಿತದಲ್ಲಿ ಪೌರಸಭಾಧ್ಯಕ್ಷರಿಗೆ ಹೆಚ್ಚಿನ ಅಧಿಕಾರಗಳಿರುತ್ತವೆಂಬುದಾಗಿ ನಾವೆಲ್ಲರೂ ನಂಬಿದ್ದೆವು. ಆದರೆ ಈಗ ಆ ಭ್ರಮೆಯೆಲ್ಲ ಮಾಯವಾಗಿ ನಾವು ಈ ಕಮಿಷನರ ಆಡಳಿತದಲ್ಲೂ ಆ ನಂತರ ಈ ಡೆಪ್ಯುಟಿ ಕಮಿಷನರ ಅಧಿಕಾರವ್ಯಾಪ್ತಿಯಲ್ಲೂ ಕೆಲಸ ಮಾಡಬೇಕಾಗಿದೆ. ಈ ರೀತಿಯಾಗಿ ಈ ಮಸೂದೆಯಲ್ಲಿ ಸೂಚಿಸಿರುವುದಕ್ಕಾಗಿ ನಾನು ಬಹಳ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದೆಲ್ಲವನ್ನು ಕ್ಲಾಜ್ 43 ರಲ್ಲಿ ಹೇಳಿದೆ. ದಯವಿಟ್ಟು ಓದಿನೋಡಿ—"Subject to the provisions of Chapter XIV, it shall be the duty of the President of a Municpal Council..." ಎಂದು ಹೇಳಿ ಇದರಲ್ಲಿ ತಿಳಿಸಿದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಕ್ಲಾಜಿನಲ್ಲಿ ಈ ಪೌರಸಭಾಧ್ಯಕ್ಷರುಗಳಿಗೆ ಮೀಟಿಂಗ್ ನಡೆಸುವ ಅಧಿಕಾರವನ್ನು ಮಾತ್ರ ಕೊಡಲಾಗಿದೆ. ಇದರಲ್ಲಿ ಅಷ್ಟು ವಿನಾ ಬೇರೇನೂ ಅಧಿಕಾರ ಇಲ್ಲ. ಆ ಮೈಸೂರು ಮುನಿಸಿಪ್ಯಾಲಿಟಿಯಲ್ಲಿ ಮಾನ್ಯ ಮಂತ್ರಿಗಳೂ ಇದ್ದರೂ ನಾನೂ ಕೂಡ ಇದ್ದೆ. ಅಲ್ಲಿ ಏನು ಕೆಲಸ ಮಾಡಿದ್ದೇವೆಂಬ ವಿಚಾರ ಅವರಿಗೂ ಗೊತ್ತಿದೆ, ನನಗೂ ಗೊತ್ತಿದೆ. ಆದರೆ ಈಗ ಇದರಲ್ಲಿ ಒಂದೆರಡು ಹೊಸ ಛಾಪ್ಟರನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ಒಂದು ಇಂಪ್ರೂವ್‌ಮೆಂಟ್ ಸ್ಕೀಮು ವಿಚಾರ ಮತ್ತೊಂದು ಮಿಸ್ಲೇನಿಯಸ್-ಛಾಪ್ಟರು. ಆದರೆ ಎರಡು ಹೊಸ ಛಾಪ್ಟರುಗಳ ವಿಚಾರದಲ್ಲೂ ಸಹ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವಿದೆಯೇ ವಿನಾ ಈ ಅಧ್ಯಕ್ಷರುಗಳಿಗಿಲ್ಲ. ಹೀಗೆ ಈ ಹದಿನಾರು ಛಾಪ್ಟರುಗಳಲ್ಲೂ ಸರ್ಕಾರಕ್ಕೆ ಅಧಿಕಾರವೆಲ್ಲ ಸೇರಿರುತ್ತದೆ. ಹೀಗೆ ಈ ಹದಿನಾರು ಛಾಪ್ಟರುಗಳಲ್ಲಿ ಎಲ್ಲಿ ನೋಡಿದರೂ ಸರ್ಕಾರದವರು ಹೇಳಿಕೊಳ್ಳುತ್ತಿರುವ ಆ ಡಿಸೆಂಟ್ರಲೈಜೇಷನ್ ಆಫ್ ಪವರ್ ಎಂಬುದರ ಸುಳಿವೇ ಕಾಣುತ್ತಿಲ್ಲ. ಈ ಮಸೂದೆಯನ್ನು ಮಂಡಿಸಿರತಕ್ಕ ಮಾನ್ಯ ಮಂತ್ರಿಗಳಾದರೂ ಆ ಮುನಿಸಿಪಾಲಿಟಿಯಲ್ಲಿ 2 ವರ್ಷಕಾಲ ಅಧಿಕಾರ ಮಾಡಿರತಕ್ಕವರಾಗಿದ್ದಾರೆ, ಪ್ರಜಾಪ್ರಭುತ್ವಾಡಳಿತವೆಂದರೇನು ಎಂಬುದನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಹೀಗಿದ್ದಾಗ್ಯೂ ಈ ದಿವಸ ಇವರೇ ಈ ಪೌರಸಭಾಧ್ಯಕ್ಷರುಗಳಿಗೆ-ಪೌರ ಸಂಸ್ಥೆಗಳಿಗೆ ಒಂದು ಹೆಚ್ಚಿನ ಅಧಿಕಾರವನ್ನು ಕೊಡದಿರುವುದು ತುಂಬಾ ವಿಷಾದಕರ. ಈಗಲೂ ಸಹ ಈ ಮಸೂದೆಯನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಿ ಈ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಈ ಪೌರಸಭೆಗಳ ಆಡಳಿತ ವಿಚಾರದಲ್ಲಿ ಸರ್ಕಾರಕ್ಕೆ ಅನೇಕ ರೀತಿಯಲ್ಲಿ ರೆಸಲ್ಯೂಷನ್‌ಗಳು ಬರುತ್ತಿವೆ. ಅವುಗಳಿಗೆ ಸರ್ಕಾರದವರು ಯಾವ ಮನ್ನಣೆಯನ್ನೂ ಕೊಡದೆ ಆರೇಳು ವರ್ಷಗಳಾದರೂ ಅವು ಹಾಗೆ ಸರ್ಕಾರದಲ್ಲಿ ಮುಲ್ಕಿ ಬಿದ್ದಿರುತ್ತವೆ. ಇಂಥ ನಿದರ್ಶನಗಳು ಬಹಳ ಇವೆ. ಉದಾಹರಣೆಗೆ ಹೇಳುವುದಾದರೆ ನಾನೇ ನಮ್ಮ ಆ ಪೌರಸಭೆ ವಿಚಾರದಲ್ಲಿ ಬೇಕಾದಷ್ಟು ರೆಸಲ್ಯೂಷನ್‌ಗಳನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಆದರೆ ಅವುಗಳಿಗೊಂದಕ್ಕೂ ಇಲ್ಲಿಯವರೆಗಾದರೂ ಒಂದು ಅಕ್ನಾಲೆಡ್ಜ್‌ಮೆಂಟ್ ಸಹಿತ ಬಂದಿಲ್ಲ. ಡೆಪ್ಯುಟಿ ಕಮಿಷನರಿಂದಲೂ ಜವಾಬಿಲ್ಲ—ಸರ್ಕಾರದ ಮಟ್ಟದಿಂದಲೂ ಜವಾಬಿಲ್ಲ. ಇಂಥ ಡಿಫೆಕ್ಟಿವ್ ಆದ ಕಾನೂನುಗಳನ್ನು ನಾನೀದಿವಸ ಪಾಸ್ ಮಾಡುತ್ತಿರುವುದರಿಂದ ನಮ್ಮ ಅನೇಕ ಕೇಸುಗಳು ಕೋರ್ಟಿನ ಮುಂದೆ ಹೋದಾಗ ಇವುಗಳಿಗೆ ಸೋಲಾಗುತ್ತಿದೆ. ಇಂಥದ್ದಕ್ಕೆ ಅವಕಾಶವಾಗಬಾರದು. ಆದ್ದರಿಂದ ಈ ಮಸೂದೆಗೆ ವಿಶೇಷ ತಿದ್ದುಪಡಿ

(ಶ್ರೀ ಬಿ. ಕೆ. ಪುಟ್ಟಯ್ಯ)

ಗಳನ್ನು ಮಾಡಬೇಕಾಗಿದೆ. ಇದನ್ನು ಕೂಲಂಕಷವಾಗಿ ವಿಚಾರ ಮಾಡಿ ಇದರಲ್ಲಿರತಕ್ಕ ಲೋಪ ದೋಷಗಳನ್ನೆಲ್ಲ ಸರಿಪಡಿಸುತ್ತಾರೆಂದ ನಾನು ಭಾವಿಸುತ್ತೇನೆ.

ಈ ದಿವಸ ಈ ಪೌರಸಭೆಗಳ ಬಗ್ಗೆ ಸರ್ಕಾರಕ್ಕೆ ನಾನಾ ದೂರುಗಳು ಬರುತ್ತಿವೆ. ಆದರೆ ಇವುಗಳಲ್ಲಿ ಯಾವ ಪೌರಸಭೆಯು ಸರ್ಕಾರದವರಿಗೆ ಆಗದ್ದು ಇರುತ್ತದೆಯೋ ಅಂಥ ಪೌರಸಭೆಯ ಮೇಲೆ ಇವರು ಕೂಡಲೆ ನೋಟೀಸ್ ವಗೈರೆಗಳನ್ನು ಅವುಗಳಿಗೊಂದು ತೊಂದರೆ ಕೊಡತಕ್ಕ ಬಗ್ಗೆ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತಾರೆ. ಆದರೆ ಬಾಕಿಯವುಗಳ ವಿಚಾರದಲ್ಲಿ ಏನು ಕ್ರಮ ಕೈಗೊಂಡಿರುವುದಿಲ್ಲ. ನೂರಾರು ನಿದರ್ಶನಗಳಿವೆ. ಸರ್ಕಾರಕ್ಕೆ ಬೇಕಾದಂಥ ಅನೇಕ ಪೌರಸಭೆ ಗಳಲ್ಲಿ ಲೆಕ್ಕಗಳು 27-28 ವರ್ಷಗಳಿಂದಲೂ ಆಡಿಟ್ ಆಗದಂಥಾ ನಿದರ್ಶನಗಳಿವೆ. ಸರ್ಕಾರದವರು ಇವುಗಳ ವಿಚಾರದಲ್ಲಿ ಇಲ್ಲಿಯವರೆಗೇನು ಕಾರ್ಯಕ್ರಮ ಕೈಗೊಂಡಿದ್ದಾರೆ ಎಂದು ಕೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಯಾವುದು ಅಂಥಾದ್ದಿದೆ ?

ಶ್ರೀ ಬಿ. ಕೆ. ಪುಟ್ಟಯ್ಯ.—ತಮ್ಮ ಆಡಳಿತದಲ್ಲಿದ್ದ ಮುನಿಸಿಪಾಲಿಟಿಯಲ್ಲೇ ಈ ರೀತಿ ಆಗಿದೆ ಎಂಬುದನ್ನು ನಾನು ಮತ್ತೆ ತಿಳಿಸಬೇಕೇನು ?

Sri K. PUTTASWAMY.—I am sorry, Sir—the Hon'ble Member being a member of the Municipal Council for such a long time is telling the House that the accounts of the Mysore City Municipality are not audited. He has forgotten the fact that in Mysore City Municipality there is a system of pre-audit and everything is being audited before any expenditure is incurred.

ಶ್ರೀ ಬಿ. ಕೆ. ಪುಟ್ಟಯ್ಯ.-ಆಡಳಿತದಲ್ಲಿ ಇಷ್ಟೊಂದು ಹೆಚ್ಚಿನ ಅನುಭವವುಳ್ಳ ಮಾನ್ಯ ಮಂತ್ರಿಗಳೇ ಆ ಲೆಕ್ಕಗಳು ಪ್ರೀ-ಆಡಿಟ್ ಆಗಿರುತ್ತವೆಂದು ಹೇಳತಕ್ಕದ್ದು ಬಹಳ ಆಶ್ಚರ್ಯವಾಗಿದೆ. ನಮ್ಮ ಆ ಮುನಿಸಿಪಾಲಿಟಿಯಲ್ಲಿ ಕಳೆದ 27 ವರ್ಷಗಳಿಂದ ಲೆಕ್ಕಗಳು ಆಡಿಟ್ಟೇ ಆಗಿಲ್ಲ. ಅದನ್ನು ಆಡಿಟ್ ಮಾಡಿಸಬೇಕೆಂದು ನಾವೀಗ ಒತ್ತಾಯ ಮಾಡುತ್ತಿದ್ದೇವೆ. ಆದರೆ ಈಗ ಆಗುತ್ತಿರುವಂತೆ ದಿನವಹಿ ಲೆಕ್ಕಾಚಾರಗಳ ಆಡಿಟ್ ಆದರೆ ಸಾಕೆಂತ ಹೇಳುವುದು ಸರಿಯಲ್ಲ. ಪ್ರತಿಯೊಂದು ಸಂಸ್ಥೆಗೂ ಒಂದು ವರ್ಷಾಖೈರಿನಲ್ಲಿ ಆಡಿಟ್ ಆಗಲೇಬೇಕು. ಅದನ್ನು ವಾರ್ಷಿಕ ಸಭೆಯ ಮುಂದಿಡಲೇಬೇಕು. ಆದರೆ ಈ ಪ್ರೀ-ಆಡಿಟ್ ಅನ್ನುವುದೇನಿದ್ದರೂ ಆಯಾಯ ದಿನದ ಲೆಕ್ಕಾಚಾರಗಳನ್ನು ಮಾತ್ರ ನೋಡಿ ಕೊಳ್ಳಲಾಗುತ್ತಿದೆ. ಈ ವಿಚಾರವನ್ನು ನಾನೀಗ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

Sri K. PUTTASWAMY.—Again the Hon'ble Member is making a mistake. In a Co-operative Society, it is internal audit. Here, an Officer from the State Accounts Department is there with his staff and every expenditure can be incurred only after he is satisfied that the expenditure is in accordance with rules and it has had the proper sanction.

ಶ್ರೀ ಬಿ. ಕೆ. ಪುಟ್ಟಯ್ಯ.—ಸ್ವಾಮಿ, ಈಗ ಮಂತ್ರಿಗಳು ಹೇಳುತ್ತಿರುವ ಈ ಪ್ರೀ-ಆಡಿಟ್ ಸಿಸ್ಟಂ ಅನ್ನುವುದು ಅಲ್ಲಿ ಈಗ್ಗೆ 3-4 ವರ್ಷಗಳಿಂದ ಮಾತ್ರ ಜಾರಿಗೆ ಬಂದಿರುತ್ತೆ. ಆದರೆ ಅದರ ಹಿಂದಿನ 27 ವರ್ಷಗಳ ಲೆಕ್ಕಪತ್ರಗಳ ಬಗ್ಗೆ ಯಾವ ಆಡಿಟ್ಟೂ ಕೂಡ ಆಗಿಲ್ಲ. ಅವು ಹಾಗೆ ಉಳಿದು ಕೊಂಡು ಬಂದಿವೆ. ಈ ಲೆಕ್ಕಪತ್ರಗಳನ್ನೆಲ್ಲ ನೋಡಲು ಒಂದು ಸಿಬ್ಬಂದಿ ವರ್ಗವನ್ನು ನೇಮಿಸಿ ಎಂತ ಕೇಳುತ್ತಿದ್ದೇವೆ. ಆದರೆ ಅದನ್ನು ಇಲ್ಲಿಯವರೆಗೂ ಮಾಡಿಲ್ಲ. ಈಗಲಾದರೂ ಸರ್ಕಾರದವರು ಈ ವಿಚಾರಕ್ಕೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ಇವರು ತಮಗೆ ಆಗದಿರುವ ಪೌರಸಭೆಗಳ ಮೇಲಾದರೆ ಕೂಡಲೇ ಷೋಕಾಸ್ ವಗೈರೆ ನೋಟೀಸುಗಳನ್ನು ಜಾರಿ ಮಾಡಿ ಅವು ಗಳ ಮೇಲೆ ಗಲಾಟೆ ಎಬ್ಬಿಸುತ್ತಿದ್ದಾರೆ. ಅವರಿಗೆ ಬೇಕಾದ ಪೌರಸಭೆಗಳ ಮೇಲೆ ಎಷ್ಟೇ ಪುಕಾರು ಗಳು ಬಂದಾಗ್ಯೂ ಏನು ಕ್ರಮ ಕೈಗೊಳ್ಳದೆ ಈ ದಿವಸ ಈ ಆಡಳಿತವರ್ಗ ಒಂದು ಕಣ್ಣಿಗೆ ಬೆಣ್ಣೆ-ಒಂದು ಕಣ್ಣಿಗೆ ಸುಣ್ಣ ಹಚ್ಚತಕ್ಕ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದು ಖಂಡಿತ ಸರಿಯಲ್ಲ. ಇಂಥ ನೀತಿಯಿರುವುದಕ್ಕಾಗಿ ನಾನು ತುಂಬಾ ವಿಷಾದಪಡುತ್ತೇನೆ.

ಇನ್ನು ಈ ಸಾಮಾನುಗಳ ಮೇಲೆ ಹಾಕತಕ್ಕ ಟ್ಯಾಕ್ಸ್‌ಗಳ ವಿಚಾರಕ್ಕೆ ಬಂದರೆ ನಾವು ಆಕ್ಟ್ರಾಯಿ ಹಾಕತಕ್ಕ ವಸ್ತುಗಳೇನಿವೆ ಅವುಗಳ ಮೇಲೆ ಕೇಂದ್ರದವರೂ ಸಹ ವಿಪರೀತವಾಗಿ ಈಗಾ ಗಲೆ ಟ್ಯಾಕ್ಸ್ ಹಾಕಿರುತ್ತಾರೆ. ಅದರ ಜೊತೆಗೆ ಈಗ ಈ ಸಂಸ್ಥಾನಗಳ ಟ್ಯಾಕ್ಸೂ ಸೇರಿಬಿಟ್ಟರೆ—

ಅಂದರೆ ಈಗ ಈ ಮಸೂದೆಯಲ್ಲಿ ಹೇಳಿರತಕ್ಕಂಥಾ ಟ್ಯಾಕ್ಸ್‌ಗಳನ್ನೆಲ್ಲಾ ಹಾಕಿಬಿಟ್ಟರೆ ಬಡಜನರ ಮಾತು ಹಾಗಿರಲಿ—ಮಧ್ಯಮ ವರ್ಗದವರ ವಿಚಾರವೂ ಒತ್ತಟ್ಟಿಗಿರಲಿ—ಯಾವ ಶ್ರೀಮಂತನೇ ಆಗಲಿ ಇಷ್ಟು ಟ್ಯಾಕ್ಸ್ ಕೊಟ್ಟು ಆತ ಉಳಿಯಲು ಸಾಧ್ಯವೇ ಇಲ್ಲ. ನೇರವಾಗಿ ಹಾಕದಿರತಕ್ಕ ಕಂದಾಯಗಳು ಬೇರೆ ಇರುತ್ತವೆ. ಹೀಗೆ ಕಂದಾಯ ಹಾಕುವುದಕ್ಕೂ ಒಂದು ಲಿಮಿಟ್ ಇರಬೇಕು. ಜನರಲ್ಲಿರತಕ್ಕ ಆಸಕ್ತಿ ಕುಗ್ಗುವಂತೆ ಮಾಡಬಾರದು. ಇಂಥಾ ಅವಕಾಶಗಳನ್ನುಂಟು ಮಾಡುವುದ ರಿಂದ ಇದು ಕೆಲವರಿಗೆ ದುರುಪಯೋಗ ಮಾಡಿಕೊಳ್ಳಲು ಅವಕಾಶ ಕೊಡುತ್ತವೆ. ಈ ಕಾನೂನು ಗಳನ್ನು ದುರುಪಯೋಗಪಡಿಸಿಕೊಳ್ಳುವಂಥಾ ಜನರಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಬಹಳ ಎಚ್ಚರಿಕೆಯಿಂದಿರಬೇಕು. ಆದರೆ ಜನರಿಂದು ಇನ್ನೂ ಅಷ್ಟು ಎಚ್ಚರವಾಗಿಲ್ಲ. ಅವರೂ ಕೂಡ ಸದ್ಯದಲ್ಲೇ ಎಚ್ಚರಗೊಳ್ಳುವ ಅವಕಾಶ ಹತ್ತಿರ ಹತ್ತಿರವೇ ಬರುತ್ತಿದೆ.

ಈಗ ಷೆಡ್ಯೂಲ್ ನಂಬರ್ ಒಂದರಲ್ಲಿ ಹಿಂದೆ 100 ಚ. ಗ. ಕ್ಕೆ 8 ಆಣೆ ಕಂದಾಯವಿದ್ದ ಕಡೆ ಈಗ 2 ರೂ.ಗಳ ಕಂದಾಯವನ್ನೇ ಹಾಕಿದ್ದಾರೆ. ಹೀಗೆ ಕೆಲವು ಬಾಬುಗಳಲ್ಲಿ ಒಂದಕ್ಕೆ ಎರಡು, ಮೂರು ನಾಲ್ಕರಷ್ಟು ಹೆಚ್ಚು ಮಾಡಿದ್ದಾರೆ.

† ಶ್ರೀ ಕೆ. ಪುಟ್ಟಸ್ವಾಮಿ.—ಮಧ್ಯೇ ಪ್ರವೇಶಿಸಿದರೆ ಸದಸ್ಯರು ಅನ್ಯಥಾ ಭಾವಿಸುವುದಲ್ಲವೆಂದು ತಿಳಿದಿದ್ದೇನೆ. ಈ ವಿಚಾರವನ್ನೂ ಅವರು ಪ್ರಸ್ತಾಪ ಮಾಡಿದ್ದು ಒಳ್ಳೆಯದೇ ಆಗಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಣವುಳ್ಳವರು ಸೈಟುಗಳನ್ನೂ ತೆಗೆದುಕೊಂಡು, ಅದರ ಮೇಲೆ ಹೆಚ್ಚು ಕಂದಾಯ ಕೂಡ ಬೀಳದೆ ಇರುವುದರಿಂದ ಖಾಲಿಯಾಗಿ ಬಿಟ್ಟಿದ್ದು ಹತ್ತಾರು ವರ್ಷ ಕಳೆದನಂತರ ಅದನ್ನೂ ಹತ್ತುಪಟ್ಟು ಬೆಲೆಗೆ ಮಾರುತ್ತಿರುವುದು ತಮ್ಮೆಲ್ಲರಿಗೂ ಗೊತ್ತೇ ಇದೆ. ಹೀಗೆ ಬೆಂಗಳೂರು, ಮೈಸೂರು ಮುಂತಾದ ಕಡೆ ಇದೆ. ಮುನಿಸಿಪಾಲಿಟಿಯವರು ಸೈಟ್‌ಗಳಿರುವ ಜಾಗದಲ್ಲಿ ರಸ್ತೆ ಮುಂತಾದುವನ್ನು maintain ಮಾಡಬೇಕಾಗಿರುವ ಜವಾಬ್ದಾರಿ ಹೊಂದಿರುತ್ತಾರೆ. ಮನೆಗಳ ಸಮಸ್ಯೆ ನಿವಾರಣೆಯಾಗಬೇಕಾದರೆ, ಖಾಲಿ ನಿವೇಶನಗಳನ್ನು ಬಿಡುವುದನ್ನು discourage ಮಾಡ ಬೇಕಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಸೂಚಿಸಿರುವುದು. ಹಣವಿರುವವರು ಖಾಲಿ ಸೈಟು ಗಳನ್ನು ಪಡೆದಿರುವುದರಿಂದ ಅವರ ಹತ್ತಿರ ಸೈಟ್ ಇರುತ್ತದೆಯೇ ವಿನಾ ಅದನ್ನು ಕಟ್ಟಬೇಕೆಂಬ ಧರದು ಇರುವುದಿಲ್ಲ. ಮೈಸೂರಿನಲ್ಲಿ ನೋಡುವುದಾದರೆ ಸೈಟುಗಳೆಲ್ಲ ಮಾರಾಟವಾಗಿವೆ. ಆದರೆ ಅಲ್ಲಿ ಮನೆಗಳನ್ನು ಕಟ್ಟಿಲ್ಲ. ಹೊಸ ಬಡಾವಣೆ ಮಾಡಬೇಕಾದರೆ ಅರ್ಧ ಮೈಲಿ, ಒಂದು ಮೈಲಿ ಬಿಟ್ಟು ಮಾಡಬೇಕಾಗಿದೆ. ಖಾಲಿ ನಿವೇಶನಗಳನ್ನು ಹೊಂದುವ ಪ್ರವೃತ್ತಿಯನ್ನು ನಿರುತ್ತೇಜನ ಗೊಳಿಸುವ ಉದ್ದೇಶದಿಂದ ಇದನ್ನು ತಂದಿದ್ದೇವೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಈಗ ಸೂಚಿಸಿರುವುದು ಬಹಳ ಜಾಸ್ತಿ. ಎಂಟಾಣೆ ಇದ್ದುದನ್ನು ಎರಡು ರೂಪಾಯಿ ಮಾಡಿದರೆ ಬಹಳ ಕಷ್ಟವಾಗುತ್ತದೆ. ಇದನ್ನೂ ಕಡಮೆ ಮಾಡಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಐದು ರೂಪಾಯಿ ಮಾಡಬೇಕು.

ಶ್ರೀ ಬಿ. ಕೆ. ಪುಟ್ಟಯ್ಯ.—ಮುಂದೆ ಮುಂದೆ ಹೋದಹಾಗೆಲ್ಲ ಹಿಂದಿನದನ್ನು ಮರೆಯುವುದು ಸ್ವಾಭಾವಿಕ. ಆದರೆ ನಮ್ಮ ಜೊತೆಯಲ್ಲಿರುವ ಜನ ಯಾವ ರೀತಿ ಇದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಈಗ ಮಂತ್ರಿಗಳಾಗಿದ್ದರೂ ಹಿಂದಿನದನ್ನು ಮರೆಯಬಾರದೆಂದು ಅಭಿಪ್ರಾಯ ಪಡುತ್ತೇನೆ.

ಇನ್ನು ನೀರಿನ ತೆರಿಗೆ ಕೂಡ ವಿಪರೀತವಾಗಿದೆ. 3% ನಿಂದ $6\frac{1}{4}$%ಗೆ ಏರಿಸಿದ್ದಾರೆ. ಇನ್ನೂ ಸರ್ಕಾರವೇ ಒಂದು ತೀರ್ಮಾನಕ್ಕೆ ಬಂದಿಲ್ಲ. ಕೆಲವು ಪಾಲನ್ನು ಸರ್ಕಾರ ಕೊಡುತ್ತದೆ, ಕೆಲವು ಭಾಗ ನಾವು ಕೊಡುತ್ತಿದ್ದೇವೆ. ಅವರು ಈ ನೀರಿನ ತೆರಿಗೆಯ ಬಗ್ಗೆ ಯಾವ ಒಂದು ನಿಷ್ಕರ್ಷೆಯಾದ ತೀರ್ಮಾನವನ್ನೂ ತೆಗೆದುಕೊಂಡಿಲ್ಲ.

123ನೆಯ ಕ್ಲಾಜಿನಲ್ಲಿ penalty forvasion ಗೊತ್ತುಮಾಡಿದ್ದಾರೆ. ಒಂದು ಕಡೆ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ಕೊಡುತ್ತಾರೆ. ಹೊಸದಾಗಿ ನಮೂದಿಸಿರುವುದರಲ್ಲಿ ಏನೂ ಹೇಳಿಲ್ಲ. ಆದುದರಿಂದ ದಯವಿಟ್ಟು ಇದನ್ನೆಲ್ಲ ಪರಿಶೀಲನೆ ಮಾಡಿ ಜನಗಳಿಗೆ ಸಾಧ್ಯವಾದ ಮಟ್ಟಿಗೂ ಅನುಕೂಲ ವಾಗುವ ರೀತಿಯಲ್ಲಿ ಕಾನೂನು ಮಾಡಬೇಕೆಂದು ಈ ಸಮಯದಲ್ಲಿ ಒತ್ತಾಯಪಡಿಸುತ್ತೇನೆ.

† **Sri B. P. KADAM** (Karwar).—The Bill brought by the Hon'ble Minister has got decidedly very nice features. The Bill seeks to have one uniform law for the whole State in place of the existing legislations in the various parts of the State. The Bill has got certain features

(SRI B. P. KADAM)

regarding the improvements for the municipal areas, to amalgamate two or more municipalities, one municipality having understanding with another muncipality or a taluk board or a village panchayat for the proper implementation of the taxation measures. In the same vein, the Bill has got certain good features for giving protection or creating a cadre of service. In the same vein, it has got certain bad points regarding too much interference by the State Government for appointing certain persons on Committees, who are not legislators and discriminating against a local language of the muncipal area, like Marathi or imposing Kannada under the force of law, which cannot be tolerated. In Chapter I, sub-clause (3) of clause 1 says that certain sections will come into force at once and the rest of the provisions of the Act shall come into force on such date as the Government may by notification appoint. one of these Sections which would come into force relate to the municipal employees and certain other matters. I cannot understand how the other provisions will come into force on such date as the Government may appoint and only these sections will come into force at once. There will be some conflict. Here under clause 11, 'Procedure for constitution, abolition, etc., of municipalities' read with clause 10 should require certain clarification and greater attention. Under clause 10, it is said "Naming of municipalities comprising of two or more places." The naming of municipalities also is vested in Government. I do not understand why. If both the municipalities which are coming together for being amalgamated agreed to certain name, I do not understand why such a name should not be accepted. Suppose both the municipalities which intended to amalgamate together cannot come to the conclusion; then what should be the suggestion to name the municipality. I think the municipality which is having greater population must have a final say and that should be respected. I think that ought to have been the specific provision included in the clause, stating that the amalgamated municipality will go by the name of the municipality having greater population.

Then under clause 11 : "Procedure for constitution, abolition, etc., of municipalities"

> "Not less than two months before the publication of any notification declaring any local area to be a city or town municipality, or altering the limits of any such municipality... the Government shall cause to be published in the Official Gazette, in English or Kannada,......"

I want to suggest that the language of the locality must also be respected. For example, along with Kannada, Tamil also must be recognised. In our area in northern taluks of Karwar and Belgaum, Marathi also was a language recognised by the then Bombay Government and still it stands recognised. The Karwar Municipality passed a resolution in 1948 that the official language must be Marathi and all

the notices, etc., must be issued in Marathi because the public understand it easily. In Belgaum, Marathi is the language spoken for the last 400 years and I feel that due recognition to this must be given and unless this Government learns to adjust things by respecting the minorities, it would operate very harshly and will create hatred which must be avoided.

Clause 13: Constitution of municipal councils. It is rightly stated that due protection shall be given for the scheduled castes and scheduled tribes. That of course is perfectly laudable. It is there in all measures and we will very welcome it. But at the same time some protection by giving certain seats to scheduled castes and scheduled tribes will not raise their status or will not improve their condition. Wherever possible, the other castes must see to it that these people are raised to the position of office bearers.

11-30 A.M.

In this Bill also, women are sought to be given protection. It is not necessary. In the Constitution no protection is given to women specifically. Women go along with men and as many women as desire get elected in the municipal bodies and special provision for women is not necessary under the present conditions.

Under Clause 14, there is a provision for appointment by Government when councillor is not elected. I do not understand why Government should come forward to nominate a person or appoint a person when there is a failure. As a matter of fact, usually there is competition. If by misunderstanding or by non-publication in the Gazette or want of due publicity, nominations are not coming forward, what best Government could do is to give a chance and some discretion to the Deputy Commissioner or Divisional Commissioner to extend the period of time so that a fresh nomination can be called forth. Otherwise, persons who are appointed are usually politically un employed people and on many occasions people without an integrity spoil the whole show of the municipality. Even if Government says that appointment is necessary, they would be good enough to see that people who have vast experience in local self-government, people with a non-political bias are appointed. Because, these conditions are vital and they will build up local self-government in its proper stature.

As I said a minute earlier, reservation of seats for women is not necessary and that is not a good feature at all. They are getting it under the Constitution and also under the Peoples Representation Act.

Under clause 19, there is a provision for appointment by Government of a special officer for the municipal council by notification in the official gazette to discharge their duties and perform functions. This is a very repugnant measure; I cannot understand why this provision should be there. As a matter of fact, it is not practical to hold general elections. As a matter of fact, in respect of local self-government, the tenure of office must be for 3 or 4 years and there must be general elections and there should not be any postponement of elections unless there is any epidemic or riot. If there is a riot, it can be controlled within a couple

(SRI B. P. KADAM)

of days and in the event of an epidemic, that also can be controlled because modern means to control that is also within our reach. Therefore, what I apprehend is that this provision for appointing a special officer will be lavishly resorted to in certain cases where the municipal bodies are not under the control of the ruling party. Care should be taken to see that this provision is not resorted to improperly.

Under clause 29, sufficient measures are taken to avoid corrupt practices. I support the provision. Under Item (6) the serving of liquor in any meeting is prohibited. I support this provision. We want to see that elections to the local bodies are conducted in a noble way and there should not be any corruption as such. These provisions are there in almost every Act pertaining to local bodies and even in the Representation of People's Act; but what we find is, there is undue influence, bribery and all such things. Merely placing these provisions on the Statute Book will not help us. Government must pay due attention to see that every candidate who resorts to such things is pursued by the C. I. Ds., the Police Department people and evidence against him must be secured and he must be disqualified. What we find is that people of degraded character, people who are guilty of misappropriation of funds and people who spend lavishly can get elected to the local bodies. A number of smugglers have succeeded in getting elected to local bodies to raise their status, to get recognition from Government to see that they are not hauled up under the extraordinary provisions in the existing Police Act.

They have spent not less than three thousand rupees to get elected for a Village Panchayet. They are prepared to spend even ten thousand to get elected as officer bearers. Care must be taken to eliminate such people.

Sri K. PUTTASWAMY.—I agree with the member. Will he suggest a way?

Sri B. P. KADAM.—Sir, everybody knows it; prosecute them; create evidence.

Sri K. PUTTASWAMY.—This Government is not in the habit of creating evidence.

Sri B. P. KADAM.—I do not mean manufacturing evidence; correct evidence must be created. Then, Sir, clause 41 is very vague. We do not understand how it will be used. Taking the dictionary meaning, it will not take us further. Therefore, it will be necessary to see that this provisions are not resorted to and if resorted to, they must be done very wisely. In our area, there has been an organised effort to protect the interest of the Marathi speaking people. So, wherever possible, we have passed resolutions but these resolutions, under the existing Act, are not sent by the local authorities. I am afraid that the Deputy Commissioners and other officers may say that these people are interrupting and they may resort to this provision. Therefore, 41(1) is totally vague and I apprehend lot of mischief and

evil intention out of this clause. Then, there is provision for the Government to appoint or nominate office-bearers in case the Municipalities fail to appoint within the scheduled time. Under this clause also, I feel, there will be considerable hardship. On account of some misunderstanding, it may not be possible to elect office-bearers in time. Therefore, to create healthy atmosphere, it is desirable that the District Officer should persuade the Municipality to elect the office-bearers within a scheduled time. I feel one month's time would not be unreasonable. I am sure it will create good precedent for the office-bearers to run the administration very efficiently.

Sir, Clause 63 is a repugnant clause. I do not know why the Council should consist people who are not Councillors. This provision may be used to bring in some of the defeated members into the Municipal Council. This provision must be deleted.

Again, under Clause 66, under the proviso, reference is made only to English and Kannada and not to the local language. The local language like Marathi must be respected. Otherwise, it would be very difficult for the people in our area. The local bodies have passed resolution that the proceedings must be in a particular language. Then, Sir, there is a provision to get the opinion of the office-bearers by circulation. This will defeat the very purpose of democracy. Decisions must be arrived at after full deliberation and discussion. Clause 67 is a welcome measure and in my opinion such a clause is necessary because in certain places there are organised efforts to defeat the taxation measures. Under Clause 71, the Divisional Commissioner ought to have been given certain powers. Therefore, I feel that this power can well be vested in the Deputy Commissioner and where the amount exceeds a prescribed limit, it can be with the Divisional Commissioner. It is not necessary that Government should appear in the picture so often. This kind of interference of officers is quite welcome for it is possible that on account of quarrels between factions in the Municipality, evil motives may arise to favour some against some others.

Under Clause 74 there is a good provision, which I wholeheartedly support. Sub-clause 2 provides that the Councillors and staff shall be responsible for neglect, wastage etc., on account of their misconduct. Many of these peple escape punishment on the ground that they did things in 'good faith' or in pursuance of a public duty. Thus, they enrich themselves or give favours to others at the cost of the public exchequer. In such circumstances, this provision is sublime. Government should take note to see that all the concerned people are fully aware of this provision.

Under Clause 77 the councillors are deemed to be public servants This is a special feature and a welcome feature. The councillors should not escape on the ground they are doing public service.

Clauses 223 to 227 are all good provisions and deserve to be supported. They lay special stress on the cleanliness of the city. Specially intentionally creating dirt and creating mischief are said to be punishable. Government should implement these provisions ruthlessly.

(SRI B. P. KADAM)

In Clause 195 there is a provision for granting permission for establishing factories. The Municipality can give such permission. Unfortunately there are factions in the municipalities and the promoters of the factory are people who are very opulent and they bribe the factions and get the permission. Such permission should not be given in places where the population is thick and starting of factories would endanger the health and safety of the people. There are certain instances where rich businessmen have taken advantage of the groupism and faction in the municipality and obtained permissions for establishing factories. Afterwards the matter was raised before the Deputy Commissioner by the people of the locality and the D.C. after looking into the records revoked the permission. Therefore, I feel that power to grant such permissions should not vest in the municipality. The provision has often been misused in the past. The D.C. should grant such permission.

MR. SPEAKER.—Does the Hon'ble Member want to divest the municipality of that power?

SRI B. P. KADAM.—Yes, Sir.

Section 339 creates a Local Government service. This is a very healthy, welcome and novel measure. In Bombay such a service does not exist. It gives protection and special status to the municipal officers and employees.

With these words I welcome this Bill subject to certain changes which I have suggested.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದರೆ).—ಸ್ವಾಮಿ, ಈಗ ಪೌರಸಭೆಗಳಿಗೆ ಸಂಬಂಧಪಾಥ ಮಸೂದೆ ಬಹಳ ಪ್ರಾಮುಖ್ಯವಾದುದು. ಇಡೀ ರಾಜ್ಯದಲ್ಲಿ ಬೇರೆ ಬೇರೆ ವಿವಿಧ ಸ್ಥಳೀಯ ಆಡಳಿತವನ್ನು ನಾವು ಯಾವ ದೃಷ್ಟಿಯಿಂದ ನೋಡುತ್ತೇವೆಂದರೆ, ಪಂಚಾಯಿತಿ ರಾಜ್ಯವೆಂದು ಕರೆದು ಆ ರಾಜ್ಯವನ್ನು ಕಟ್ಟಲಿಕ್ಕೆ ಹೊರಟಿದ್ದೇವೆಯೋ ಆ ದೃಷ್ಟಿಯಿಂದ ನೋಡುತ್ತೇವೆ. ಆ ದೃಷ್ಟಿಯಿಂದ ಈ ನಗರ ಪೌರಸಭೆಗಳಿಗೆ ಸಂಬಂಧಿಸಿದ ಈ ಮಸೂದೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ ಎಂಬುದು ಸ್ಪಷ್ಟ. ಈ ವಿಚಾರದಲ್ಲಿ ಹೇಳುವುದಾದರೆ ಸರ್ಕಾರ decentralisation of powers ಮಾಡುತ್ತೇವೆಂದು ಸಾರುತ್ತಾ ಇದೆ. ಈ ಮಸೂದೆಯಲ್ಲಿ ಇದು ಇಷ್ಟರ ಮಟ್ಟಿಗೆ ಈ ಪವರ್ ರಿಸೆಂಟ್ರಲೈಸೇಷನ್ನಿಗೆ ಗಮನ ಕೊಟ್ಟಿದೆ ಎಂಬ ಪ್ರಶ್ನೆಯನ್ನು ನಾವು ನೋಡಬೇಕಾಗಿದೆ. ಸ್ವಯಂ ಅಧಿಕಾರ ಉಳ್ಳಂಥ ಸಂಸ್ಥೆಗಳನ್ನು ರಚಿಸುವಾಗ, ಅವುಗಳಿಗೆ ಅಧಿಕಾರದಲ್ಲಿ ಹೆಚ್ಚಿನ ಪಾಲನ್ನು ಕೊಡಬೇಕು. ಏಕೆಂದರೆ ಹೆಚ್ಚಿನ ನಗರವಾಸಿಗಳು ಯಾರು ಈ ಪುರಸಭೆಗಳಿಗೆ ನೇಮಿತರಾಗುತ್ತಾರೋ ಅವರು ಜವಾಬ್ದಾರಿಯುಳ್ಳವರು ಮತ್ತು ರಾಜ್ಯದ ಆಡಳಿತವನ್ನು ನಾಳೆ ನಡೆಸತಕ್ಕವರು ಮತ್ತು ಅನೇಕರು ಈ ಸಭೆಯ ಸದಸ್ಯರಾಗುವವರು. ಸಾರ್ವಜನಿಕ ಜೀವನದಲ್ಲಿ ಸ್ವಯಂ ಆಡಳಿತವನ್ನು ವಹಿಸಲು ಬೇಕಾದಂಥ ಅನುಭವವನ್ನು ಪಡೆಯಲು ಬರುವ ಬಹು ಸಣ್ಣ ಶಾಲೆ ಈ ಪೌರಸಭೆ. ಆದ್ದರಿಂದ ಸರಿಯಾದ ಸಮಾನಾವಕಾಶಗಳನ್ನು ಕಲ್ಪಿಸಿಕೊಡಬೇಕಾದುದು ಸರ್ಕಾರದ ಜವಾಬ್ದಾರಿ.

[MR. DEPUTY SPEAKER.—in the Chair.]

12 NOON.

ಈ ದೃಷ್ಟಿಯಿಂದ ಈ ಕಾಯಿದೆಯಲ್ಲಿ ಅಂಥಾ ಒಂದು ಅವಕಾಶವನ್ನು ಕಲ್ಪಿಸಿರುವುದು ಕಾಣುವುದಿಲ್ಲ. ಪ್ರತಿಯೊಂದೂ ಓದಿದರೆ ಸರ್ಕಾರದ ಕೈವಾಡವೇ ಹೆಚ್ಚಾಗಿದೆ. ಎಲ್ಲಿ ಅಗತ್ಯ ಬೀಳುತ್ತದೆಯೋ ಅಲ್ಲೆಲ್ಲಾ ಸರ್ಕಾರ ನಾಮಿನೇಷನ್ ಮಾಡಲು ಅಧಿಕಾರ ಹೊಂದಿರುತ್ತದೆ.

ಸರ್ಕಾರದ ಅಧಿಕಾರವನ್ನು ಕಡಿಮೆ ಮಾಡಿ ಅದನ್ನು ಜನತೆಯ ಕೈಯ್ಯಲ್ಲಿ ಕೊಡುವ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು. ಅದಕ್ಕೆ ಅನುಗುಣವಾಗುವಂಥ ಕಾರ್ಯ ಈ ಮಸೂದೆ ಹೆಚ್ಚಾಗಿ ಪೂರೈಸುವುದಿಲ್ಲ. ಅಷ್ಟುಮಾತ್ರವಲ್ಲ, ಈ ನಗರಸಭೆಯ ಘಟನೆ Constitutionನನ್ನು ನೋಡಿದ್ದೇ ಆದರೆ ಒಂದು ಡಿವಿಜನ್‌ನಲ್ಲಿ ಮೂರರಿಂದ ಐದು ಜನರವರೆಗೂ ಚುನಾವಣೆಯಲ್ಲಿ ಚುನಾಯಿಸಲ್ಪಡುವಂಥ ಜನರು ಇರುವುದು ಎಂದು ಹೇಳಿದೆ. ಹೀಗಿರುವುದರಿಂದ ನ್ಯಾಯಬದ್ಧವಾದ ರೀತಿಯಲ್ಲಿ ಚುನಾವಣೆ ನಡೆಯಲಿಕ್ಕೆ ಸಾಧ್ಯವಿಲ್ಲ. ಯಾರಾದರೂ ಅನುಭವಸ್ತರು ಯಾರಿರುತ್ತಾರೆ ಅವರು ಮನಸ್ಸು ಮಾಡಿದರೆ ಯಾರು ಯಾರು ಜನ ನಿಂತಿರುತ್ತಾರೆ ಅವರಿಗೆ ಗೆಲುವಾಗುತ್ತದೆ. ಅವರು ಮನಸ್ಸು ಮಾಡದೇ ಹೋದರೆ ಸೋಲಾಗುತ್ತದೆ. ಇದನ್ನು ತಪ್ಪಿಸಿ ಮದರಾಸ್ ಆಕ್ಟ್‌ನಲ್ಲಿರುವಂತೆ ವಾರ್ಡ್ ಪದ್ಧತಿ ಪ್ರಕಾರ ಚುನಾವಣೆ ಮಾಡತಕ್ಕ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಎರಡು ಅಥವಾ ಮೂರು ಸಾವಿರ ಜನಸಂಖ್ಯೆ ಇರತಕ್ಕ ಒಂದು ಸಭೆಗೆ ಒಬ್ಬರನ್ನು ಚುನಾವಣೆ ಮಾಡತಕ್ಕ ವಕಾಶ ಕಲ್ಪಿಸಿಕೊಡುವುದು ಅತ್ಯಾವಶ್ಯಕ ಎಂದು ಸಲಹೆ ಮಾಡುತ್ತೇನೆ.

ಇಷ್ಟುಮಾತ್ರವಲ್ಲ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ರಿಸರ್ವೇಷನ್ ಇದೆ. ಇದರಲ್ಲಿ 100ಕ್ಕಿಂತ ಹೆಚ್ಚು ಜನ ಯಾವ ನಗರದಲ್ಲಿ ಇರುತ್ತಾರೆ ಅವರಿಗೆ ಒಂದು ಸ್ಥಾನ ರಿಜರ್ವ್ ಮಾಡುವಂಥಹದು ಇದೆ. ಈ ರಿಸರ್ವೇಷನ್‌ಗೆ ಸಂಬಂಧಪಟ್ಟಂತೆ ರಾಜ್ಯಾಂಗದಲ್ಲೂಕೂಡ Scheduled Castes ಎಂಬ ಡಿವಿಜನ್‌ನಲ್ಲಿ Scheduled Castes and Scheduled Tribes ಎಂದು ಇದೆ. ಈ ರೀತಿ ಒಂದೊಂದು ಪ್ರತ್ಯೇಕವಾದ ಭಾಗವಾಗಿರುವುದರಿಂದ ಷೆಡ್ಯೂಲ್ಡ್ Castes ಪ್ರತ್ಯೇಕವಾದ ಒಂದು ಅವಕಾಶವನ್ನು ಕೊಡಬೇಕು. ಅದೇ ರೀ ಷೆಡ್ಯೂಲ್ಡ್ ಟ್ರೈಬ್ಸ್‌ಗೂ ಸಹ ಒಂದು ಪ್ರತ್ಯೇಕವಾದ ಅವಕಾಶವನ್ನು ಕೊಡಬೇಕು. ರಾಜ್ಯಾಂಗದಲ್ಲೂ ಈ ಒಂದು ಅವಕಾಶವನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಸರ್ವೀಸಸ್‌ನಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್‌ಗೆ 15% ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ 3% ಅಂತ ಇದೆ. ಆದರೆ, ಅಪಾಯಿಂಟ್‌ಮೆಂಟ್ ಮಾಡುವಾಗ ಅದನ್ನು club ಮಾಡಿ ಷೆಡ್ಯೂಲ್ಡ್ ಟ್ರೈಬ್ಸ್ ಇಲ್ಲದೇ ಇದ್ದರೆ ಷೆಡ್ಯೂಲ್ಡ್ castes ನವರಿಗೇ ಕೊಡಬಹುದು ಎಂದು ಇದೆ. ಅದನ್ನು ಇಲ್ಲಿ ಅನುಸರಿಸುವುದು ಸರಿಯಾಗುವುದಿಲ್ಲ. ಇಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್, ಷೆಡ್ಯೂಲ್ಡ್ ಟ್ರೈಬ್ಸ್ ಒಂದೇ ವಿಭಾಗ ಎಂದು ಮಾಡಿದರೆ ತುಂಬಾ ಬಾಧಕ ಬರುತ್ತದೆ. ಕಳೆದ ಲೋಕಲ್ ಬೋರ್ಡು, ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿ ಬೋರ್ಡು ಚುನಾವಣೆಗಳಲ್ಲಿ ನಮ್ಮ ಜಿಲ್ಲೆಯ ನಮ್ಮ ಅನುಭವ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇಬ್ಬರಲ್ಲೂ ಸಹ ಪೈಪೋಟಿ ಬಂದು, ಷೆಡ್ಯೂಲ್ಡ್ ಟ್ರೈಬ್ಸ್‌ನವರು ತಮಗೆ ತಕ್ಕ ಪ್ರಾತಿನಿಧ್ಯ ಸಿಕ್ಕಲಿಲ್ಲ ಎಂದು ಹೇಳಿ ಸರ್ಕಾರದವರಿಗೂ ಕೂಡ ಮನವಿಗಳು ಬಂದಿರುತ್ತವೆ. ಆದ್ದರಿಂದ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇಬ್ಬರೂ ಕೂಡ ಹೊಂದಿಕೊಂಡು ಹೋಗುವ ಕಾಲ ಬರುವವರೆಗೂ ಕೂಡ ಎಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಜಾಸ್ತಿ ಇದ್ದಾರೆ, ಆ ಭಾಗದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರಿಗೆ ಪ್ರತ್ಯೇಕವಾದ ಒಂದು ಸ್ಥಾನ ಮೀಸಲಾಗಿಡಿ. ಎಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಜಾಸ್ತಿಯಾಗಿದ್ದಾರೆ, ಅಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಒಂದು ಸ್ಥಾನ ಮೀಸಲಾಗಿಡಿ, ಈ ರೀತಿ ಪ್ರತ್ಯೇಕ ಪ್ರತ್ಯೇಕವಾಗಿ ಡಿಫೈನ್ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಸಿಟಿ ಮುನಿಸಿಪಲ್ ಕೌನ್ಸಿಲ್ ಮತ್ತು ಟೌನ್ ಮುನಿಸಿಪಲ್ ಕೌನ್ಸಿಲ್ ಎಂದು ವಿಭಾಗಿಸುವಾಗ 50 ಸಾವಿರದಿಂದ ಒಂದು ಲಕ್ಷ ಜನಸಂಖ್ಯೆಯವರೆಗೂ ಸಿಟಿ ಮುನಿಸಿಪಾಲಿಟಿ ಎಂತಲೂ, 10 ಸಾವಿರದಿಂದ 50 ಸಾವಿರದವರೆಗೂ ಜನಸಂಖ್ಯೆ ಇರುವುದನ್ನು ಟೌನ್ ಮುನಿಸಿಪಾಲಿಟಿ ಎಂತಲೂ ಜನಸಂಖ್ಯೆಯ ಆಧಾರದ ಮೇಲೆ ತೀರ್ಮಾನ ಮಾಡಿದ್ದೀರಿ. ಮೈಸೂರು, ದಾವಣಗೆರೆ, ಮಂಗಳೂರು ಇಂಥಾ ಫಸ್ಟ್ ಗ್ರೇಡ್ ನಗರಗಳು ಏನು ಇರುತ್ತವೆ, ಅಲ್ಲಿ ಜನರ ಜೀವನದ ಮಟ್ಟ, ಕಾರ್ಖಾನೆಗಳು ಅಥವಾ ಬೇರೆ ಬೇರೆ ಇತರ ಕಾರಣಗಳ ದೆಶೆಯಿಂದಾಗಿ ಜನಸಂಖ್ಯೆ ಜಾಸ್ತಿಯಾಗಿರುವುದು ಮಾತ್ರವಲ್ಲದೆ ಆಡಳಿತ ಕೂಡ ಹೆಚ್ಚಿನ ರೀತಿಯಲ್ಲಿ ನಡೆದಿರುತ್ತದೆ. ಮದರಾಸಿನಲ್ಲಿ ಫಸ್ಟ್ ಗ್ರೇಡ್, ಸೆಕೆಂಡ್ ಗ್ರೇಡ್, ಥರ್ಡ್ ಗ್ರೇಡ್ ಮುನಿಸಿಪಾಲಿಟಿ ಎಂದು ಹೇಳಿ ಮೂರು ಗ್ರೇಡುಗಳಾಗಿ ಮಾಡಿರುತ್ತಾರೆ. ಅದೇ ರೀತಿ ನಮ್ಮಲ್ಲೂ ಕೂಡ 1 ಲಕ್ಷಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರತಕ್ಕ ದೊಡ್ಡ ನಗರವನ್ನು ಸಿಟಿ ಮುನಿಸಿಪಾಲಿಟಿಯ ಲೆವಲ್‌ನಲ್ಲೇ ಇಡುವುದಕ್ಕಿಂತ ಕಾರ್ಪೊರೇಷನ್‌ಗೂ ಸಿಟಿ ಮುನಿಸಿಪಾಲಿಟಿಗೂ ಮಧ್ಯೆಯಿರುವಂಥ ಒಂದು ಫಸ್ಟ್ ಗ್ರೇಡ್ ಮುನಿಸಿಪಾಲಿಟಿಯನ್ನು create ಮಾಡುವುದು ಉತ್ತಮ ಮತ್ತು ಅವರಿಗೆ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಕೂಡ ಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಸರ್ವೇಸಾಧಾರಣವಾಗಿ ಹಳ್ಳಿಗಳಲ್ಲಿ ಮೊದಲು ಇತ್ತು ಏನೆಂದರೆ ಏನಾದರೂ ಒಂದು ಕೆಲಸವಾಗಬೇಕಾದರೆ ಛೇರ್ಮನ್‌ರಿಗೆ ಸಂಪೂರ್ಣ ಅಧಿಕಾರ ಇರುತ್ತಿತ್ತು. ಈಗ ಸರ್ಕಾರದವರಿಗೆ ಮನವಿ ಮಾಡಿಕೊಂಡರೆ ಡೆಪ್ಯುಟಿ ಕಮೀಷನರ ಮುಖಾಂತರ ಬರಬೇಕು ಎಂಬ ನೀತಿ ನಿಯಮ ಇರುತ್ತದೆ.

(ಶ್ರೀ ಗೋಪಾಲ ಸಾಲೆನ್ನ)

ಆದರೆ ಮದ್ರಾಸ್ ಸರ್ಕಾರದವರು ಈ ಹಿಂದೆ ಫಸ್ಟ್‌ಗ್ರೇಡ್ ಮುನಿಸಿಪ್ಯಾಲಟಿಗಳನ್ನು ನೇರವಾಗಿ ಅವರೇ ಆಡಳಿತ ನಡೆಸಿಕೊಳ್ಳಬಹುದೆಂದು ಅಧಿಕಾರ ಕೊಟ್ಟಿದ್ದರು. ಆದರೆ ಈಗ ಇಂಥಾ ಒಂದು ಅಧಿಕಾರವನ್ನು ಕೊಡುವ ಫಸ್ಟ್‌ಗ್ರೇಡ್ ಕಾರ್ಪೊರೇಷನ್‌ಗಳಿಗೂ ಮತ್ತು ಈ ಸಿಟಿ ಮುನಿಸಿಪಾಲಿಟಿಗಳಿಗೂ ಮಧ್ಯೆ ಒಂದು ಅಂತಸ್ತನ್ನು ಕಂಡುಹಿಡಿಯಬೇಕು. ಇನ್ನು ಈಗ ಈ ಮುನಿಸಿಪಾಲಟಿಗಳಿಗೆ ಕೊಟ್ಟಿರತಕ್ಕ ಅಧಿಕಾರ ಸಾಲದು. ಇವುಗಳ ಸ್ಥಾನಮಾನವನ್ನು ಇನ್ನೂ ಜಾಸ್ತಿ ಇರುವಂತೆ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಈಗ ಈ ಮೆಂಬರುಗಳ ಸಂಖ್ಯೆಯನ್ನು ನಿಶ್ಚಯ ಮಾಡತಕ್ಕ ವಿಚಾರದಲ್ಲಿ- ಯಾವ ಮುನಿಸಿಪಾಲಿಟಿಯಲ್ಲಿ ಎಂಟು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುತ್ತದೆಯೋ ಅಂಥ ಕಡೆಗಳಲ್ಲಿ ಈ ಕೌನ್ಸಿಲರುಗಳ ಸಂಖ್ಯೆ 31 ಇರಬಹುದೆಂದು ನಿಶ್ಚಯ ಮಾಡಿದ್ದಾರೆ. ಆದರೆ ಇದನ್ನು ಯಾವ ಆಧಾರದ ಮೇಲೆ ನಿಗದಿ ಮಾಡಿದ್ದಾರೆಂಬುದು ಗೊತ್ತಾಗುವುದಿಲ್ಲ. ಇಂತಿಷ್ಟು ಲಕ್ಷ ಪ್ರಜಾ ಸಂಖ್ಯೆಯಿರತಕ್ಕ ಪ್ರದೇಶಕ್ಕೆ ಇಂತಿಷ್ಟು ಪ್ರಾತಿನಿಧ್ಯವಿರಬೇಕು ಎನ್ನತಕ್ಕ ಒಂದು ತಳಹದಿ ಮೇಲೆ ಇದನ್ನು ಸ್ಪಷ್ಟಪಡಿಸಬೇಕು. ಈ ದಿವಸ ಮಂಗಳೂರಿನಲ್ಲಿ 36 ಸದಸ್ಯರುಗಳಿಗೆ ಸ್ಥಾನಗಳಿರುತ್ತದೆ. ಇದನ್ನೇನೆ ಒಂದು ಲಕ್ಷ ಪ್ರಜಾಸಂಖ್ಯೆ ಇರತಕ್ಕ ಆಧಾರದಮೇಲೆ ಮಾಡಲಾಗಿದೆ ಎಂದು ಕಾಣುತ್ತಿದೆ ! ಆದರೆ ಒಂದು ಲಕ್ಷಕ್ಕಿಂತ ಜನಸಂಖ್ಯೆ ಅಲ್ಲಿ ಜಾಸ್ತಿಯಿದೆ. ಆದರೆ ಈಗ ಈ ಮಸೂದೆಯಲ್ಲಿ 50 ಸಾವಿರಕ್ಕೆ ಮೇಲ್ಪಟ್ಟು ಒಂದು ಲಕ್ಷ ಪ್ರಜಾಸಂಖ್ಯೆ ಯಿದ್ದರೆ 27 ಸ್ಥಾನಗಳಿರಬೇಕೆಂತ ಹೇಳಲಾಗಿದೆ. ಒಂದು ಲಕ್ಷಕ್ಕೆ ಮೇಲ್ಪಟ್ಟರೆ 31 ಸ್ಥಾನಗಳೆಂದು ಹೇಳಲಾಗಿದೆ. ಆದರೆ ಈಗ ಈ 27 ಸ್ಥಾನಗಳಿಗೂ- 31 ಸ್ಥಾನಗಳಿಗೂ ಯಾವ ಸರಿಯಾದ ಒಂದು ದಾಮಾಷವೂ ಇಲ್ಲ. ಆದ್ದರಿಂದ ಇದು ಅಷ್ಟು ಸಮಂಜಸವಾಗಿದ್ದಂತೆ ಕಾಣುವುದಿಲ್ಲ. ಈಗ ಇಲ್ಲಿ ಹೇಳಿರತಕ್ಕಂಥ 20 ಸಾವಿರ ಜನಸಂಖ್ಯೆಯಿದ್ದರೆ 15 ಸ್ಥಾನಗಳಿರಬೇಕೆಂದು, 30 ಸಾವಿರದೊಳಗಿದ್ದರೆ 19 ಸ್ಥಾನಗಳಿರಬೇಕೆಂದೂ, 30 ಸಾವಿರಕ್ಕೆ ಮೇಲೆ 40 ಸಾವಿರದೊಳಗಿದ್ದರೆ 21 ಸ್ಥಾನಗಳಿರಬೇಕೆಂದೂ, 40 ಸಾವಿರಕ್ಕೆ ಮೇಲೆ 50 ಸಾವಿರದೊಳಗಿದ್ದರೆ 25 ಸ್ಥಾನಗಳಿರಬೇಕೆಂದೂ - 50 ಕ್ಕೆ ಮೇಲೆ ಒಂದು ಲಕ್ಷದೊಳಗಿದ್ದರೆ 27 ಸ್ಥಾನಗಳಿರಬೇಕೆಂದೂ; ಲಕ್ಷಕ್ಕೆ ಜಾಸ್ತಿ ಜನಸಂಖ್ಯೆ ಇರುವಕಡೆ 31 ಸ್ಥಾನಗಳಿರಬೇಕೆಂತ ಹೇಳಿದ್ದಾರೆ. ಆದರೆ ಇದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇದನ್ನು ಒಂದು ನಿರ್ದಿಷ್ಟ ತತ್ವದ ಮೇಲೆ, ಒಂದು ನಿರ್ದಿಷ್ಟ ನೀತಿ ಆಧಾರದ ಮೇಲೆ ತೀರ್ಮಾನ ಮಾಡಬೇಕಾದ್ದು ಅಗತ್ಯವೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಈಗ ಆ ಭಾರತ ಘಟನಾವಳಿ ಪ್ರಕಾರ ಅಂದರೆ ಆರ್ಟಿಕಲ್ 334 ರ ಪ್ರಕಾರ ಕೆಲವರಿಗೆ ಸ್ಥಾನಗಳನ್ನು ರಿಜರ್ವ್ ಮಾಡಲಿಕ್ಕೆ ಅವಕಾಶ ಮಾಡಿದೆ. ಅದರಂತೆ ಈಗ ಈ ಸ್ಥಾನಗಳಲ್ಲಿ ಕೆಲವನ್ನು ಮಹಿಳೆಯರಿಗಾಗಿಯೂ ರಿಜರ್ವ್ ಮಾಡಲಾಗುತ್ತಿದೆ. ಅದರೆ ಮಹಿಳೆಯರ ಬಗ್ಗೆ ರಿಜರ್ವ್ ಮಾಡಬೇಕೆಂದು ಹೇಳಿರತಕ್ಕ ವಿಚಾರದಲ್ಲಿ ಯಾವ ಒಂದು ಷರತ್ತನ್ನೂ ಹಾಕಿಲ್ಲ. ಆದರೆ ಹಿಂದುಳಿದ ಪಂಗಡಗಳಲ್ಲಿ ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿನವರಿಗೆ ಮಾತ್ರ ಕೆಲವು ಕಾಲ ಪರಿಮಿತಿ ಇತ್ಯಾದಿ ಷರತ್ತುಗಳನ್ನು ಹಾಕಲಾಗಿದೆ. ಈಹೊತ್ತು ಈ ಹರಿಜನರಿಗೆ ಆ ಗುಲ್ಬರ್ಗ ಸೈಡಿನಲ್ಲಿ ಸಾಕಷ್ಟು ರಕ್ಷಣೆ ಸಿಕ್ಕಿಲ್ಲ. ಅವರಿನ್ನೂ ಬಹಳ ಅಬಲರಿದ್ದಾರೆ. ಅವರನ್ನು ಬೇರೆಯವರು ಅನೇಕ ರೀತಿಯಲ್ಲಿ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂಬುದನ್ನು ಈಗಲೂಸಹ ತಾವು ಯಾರು ಬೇಕಾದರೂ ಕಾಣಬಹುದು. ಈ ದಿವಸ ಈ ಹರಿಜನರಿಗೆ ಈ ರಿಜರ್ವ್ ರೀತ್ಯ ಸ್ಥಾನಗಳನ್ನು ಇಡದೆ ಹೋದಲ್ಲಿ ಅವರಿಗೆ ಈ ಚುನಾವಣೆಗಳಲ್ಲಿ ಜಯಗಳಿಸಿ ಬರತಕ್ಕ ಶಕ್ತಿ ಇದೆಯೇ-ಅವರಿಗೆ ಅಂಥಾ ಸ್ಥಾನಮಾನಗಳಿದೆಯೇ ಎಂಬುದನ್ನು ಆಳವಾಗಿ ಒಳಹೊಕ್ಕು ನೋಡಿದರೆ ಇವರಿಗೆ ಯಾವ ತರಹ ಷರತ್ತುಗಳನ್ನೂ ಹಾಕದೆ ಈ ದಿವಸ ಈ ಹೆಣ್ಣುಮಕ್ಕಳ ವಿಚಾರದಲ್ಲಿ ಅನುಸರಿಸುತ್ತಿರುವ ನೀತಿಯ ಪ್ರಕಾರ, ಇವರು ಸಮಾಜದಲ್ಲಿ ಇತರರ ಮಟ್ಟಕ್ಕೆ ಬರುವತನಕ ಈ ಯಾವ ಷರತ್ತುಗಳನ್ನು ವಿಧಿಸಬಾರದೆಂದು ಹೇಳುತ್ತೇನೆ. ಆ ರೀತಿ ಒಂದು ಕ್ಲಾಜನ್ನಿಲ್ಲಿ ಅಡಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಕಾಲಪರಿಮಿತಿ ಇರಬಾರದು ಎಂದು ತಾವು ಹೇಳುತ್ತೀರೋ.

ಶ್ರೀ ಗೋಪಾಲ ಸಾಲೆನ್ನ.—ಹೌದು. ಈ ದಿವಸ ಈ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆಗಳು ನಡೆಯುತ್ತಿವೆ. ಈ ಒಂದು ಕ್ರಮದಲ್ಲಿ ಏನಿದ್ದರೂ ಯಾರು ಅಪಾರ ಧನವಂತರಿದ್ದಾರೋ ಅಥವಾ ಮತ್ತೆ ಯಾವುದಾದರೊಂದು ರೀತ್ಯಾ ಯಾರು ತುಂಬಾ ಶಕ್ತಿವಂತನಾಗಿರುತ್ತಾನೋ ಅಂಥವನೇ ಸದಾ ಈ ಸ್ಥಾನಗಳಿಗೆ ಬರುತ್ತಿರುತ್ತಾನೆ. ಹೀಗಿರುವುದರಿಂದ ಬೇರೆಯವರಿಗೆ ಈ ಸ್ಥಾನಗಳಿಗೆ ಬರಲು ಅವಕಾಶವೇ ಇಲ್ಲ. ಆದ್ದರಿಂದ ನಾಮಿನೇಷನ್ ಮೂಲಕ ಬರತಕ್ಕವರಿಗೂ ಈ ಸ್ಥಾನಗಳು ಲಭಿಸುವಂತೆ ಒಂದು ವ್ಯವಸ್ಥೆ ಇರಬೇಕು. ಈ ದೃಷ್ಟಿಯಿಂದಲೇ ಈ ದಿವಸ ಮದ್ರಾಸ್ ಮತ್ತು ಬೊಂಬಾಯಿ ಇಂಥಾ ಕಾರ್ಪೊರೇಷನ್‌ಗಳಲ್ಲಿ ಮೇಯರ್ ಸ್ಥಾನಕ್ಕೆ ಚುನಾವಣೆಯಾಗುವಾಗ

ಅಲ್ಲಿ ಎಲ್ಲರಿಗೂ ಆ ಚುನಾವಣೆಗೆ ನಿಲ್ಲಲು ಒಂದು ಸಮಾನಾವಕಾಶವನ್ನು ಕಲ್ಪಿಸಲಾಗಿದೆ. ಈ ಅಧ್ಯಕ್ಷರ, ಉಪಾಧ್ಯಕ್ಷರುಗಳು ಚುನಾವಣೆಗಳು ನಡೆಯುವಾಗ ಹಿಂದುಳಿದ ವರ್ಗಗಳಾದ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿನವರಿಗೂ ಮತ್ತು ಅಲ್ಪಸಂಖ್ಯಾತ ಪಂಗಡಗಳವರಿಗೂ ಈ ಸ್ಥಾನಮಾನಗಳು ಅವರಿಗೂ ದೊರೆಯತಕ್ಕ ಒಂದು ವಿಧಾನವನ್ನು ಕಂಡುಹಿಡಿಯಬೇಕು. ಈ ದೊಡ್ಡ ದೊಡ್ಡ ಸ್ಥಾನಗಳಿಗೆ ಒಂದು ರೊಟೇಷನ್ ಪ್ರಕಾರ ಎಲ್ಲರಿಗೂ ಆ ಸ್ಥಾನ ಲಭಿಸುವಂತೆ ಒಂದು ಕನ್ವೆನ್ಷನ್ ಬಿಲ್ಡ್ ಮಾಡಬೇಕೆಂತ ಹೇಳುತ್ತೇನೆ.

ಇನ್ನು ಅಧ್ಯಕ್ಷರಿಗೂ-ಉಪಾಧ್ಯಕ್ಷರುಗಳಿಗೂ ಅಲೋಯೆನ್ಸ್‌ನ್ನು ದೊರಕಿಸಿಕೊಡಬೇಕೆಂದು ಹೇಳಿದೆ. ಈ ಅಲೋಯೆನ್ಸ್‌ನ್ನು ಈಗ ಅಧ್ಯಕ್ಷರಾಗಿರತಕ್ಕವರಿಗೂ, ಉಪಾಧ್ಯಕ್ಷರಾಗಿರತಕ್ಕವರಿಗೂ ಹಾಗೂ ಈ ನಾನಾ ಸಬ್ ಕಮಿಟಿಗಳ ಛೇರ್ಮನ್ನರಾಗಿರತಕ್ಕವರಿಗೂ ಕೊಡಬಹುದೆಂದು ಹೇಳಿದೆ. ಈ ಸಂಸ್ಥೆಗಳಲ್ಲಿ ಕಷ್ಟ ನಷ್ಟಗಳೇನಾದರೂ ಸಂಭವಿಸಿದರೆ-ಸರ್ಕಾರದ ದುಡ್ಡು ದುರುಪಯೋಗವಾದರೆ ಆಗ ಅಧ್ಯಕ್ಷರೂ-ಉಪಾಧ್ಯಕ್ಷರೂ ಮತ್ತು ಕೌನ್ಸಿಲರ್‌ಗಳೂ ಎಲ್ಲರೂ ಜವಾಬ್ದಾರರಾಗುತ್ತಾರೆ. ಆದ್ದರಿಂದ ಇನ್ನು ಮುಂದಕ್ಕೆ ಈ ಕೌನ್ಸಿಲರ್‌ಗಳಿಗೂ ಯಾವುದಾದರೊಂದು ರೀತಿಯಲ್ಲಿ T. A ; D. A. ಅಥವಾ ಸಿಟ್ಟಿಂಗ್ ಛಾರ್ಜು ಎಂತ ಹೇಳಿ ಒಂದು ಯೋಗ್ಯವಾದ ಅನುಕೂಲ ಕಲ್ಪಿಸತಕ್ಕದ್ದು ಅವಶ್ಯಕ. ಕನ್‌ವೇಯೆನ್ಸ್ ಅಲೋಯೆನ್ಸ್ ಅಂತಲಾದರೂ ಕೊಡಬಹುದು. ಹೀಗೆ ಒಂದು ಅನುಕೂಲ ಕಲ್ಪಿಸಿಕೊಟ್ಟರೆ ಆಗ ಅವರಿಗೆ ಅಪ್ರತ್ಯಕ್ಷ ರೀತಿಯಲ್ಲಿ ಹಣಗಳಿಸಬೇಕೆಂಬ ಆಸೆಗೆ ಅವಕಾಶವಿರುವುದಿಲ್ಲ. ಈ ವಿಚಾರಕ್ಕೆ ಆಡಳಿತ ಪಕ್ಷದವರು ಹೆಚ್ಚಿನ ಗಮನ ಕೊಡತಕ್ಕದ್ದು ಯೋಗ್ಯವಾಗಿದೆ. ಅಂತೂ ಈ ಎಲ್ಲ ಕೌನ್ಸಿಲರುಗಳಿಗೂ ಕನ್‌ವೇಯೆನ್ಸ್ ಅಲೋಯೆನ್ಸ್ ಮತ್ತು ಭತ್ತ್ಯ ಕೊಡಲು ಅವಕಾಶ ಕಲ್ಪಿಸಲೇಬೇಕೆಂದು ಹೇಳುತ್ತೇನೆ. ಎಲ್ಲರಿಗೂ ಕೊಡುತ್ತಿರುವಾಗ ಇವರಿಗೇಕೆ ಕೊಡಬಾರದು ?

ಆಸ್ತಿಯ ಮೇಲೆ ನಗರ ಸಭೆ ತೆರಿಗೆಗಳನ್ನು ಹಾಕುತ್ತಾರೆ, ತೆರಿಗೆಗಳನ್ನು ಹಾಕುವಾಗ ಆ ಜನ ಕೊಡಲಿಕ್ಕೆ ಎಷ್ಟು ಮಟ್ಟಿಗೆ ಶಕ್ತಿವಂತರು, ಹೇಗೆ ವಸೂಲ್ಮಾಡಬಹುದು ಎಂದು ನೋಡಿ ಸುಲಭವಾಗಿ ವಸೂಲಾಗುವ ರೀತಿಯಲ್ಲಿ ತೆರಿಗೆಯನ್ನು ಹಾಕಬೇಕು ಮತ್ತು ಜನರಿಗೆ ವಿಪರೀತವಾದ ಹೊರೆಯಾಗದೆ ಸ್ವಸಂತೋಷದಿಂದ ಕೊಡುವಂತಾಗಬೇಕು. ಇಂಗ್ಲೆಂಡ್, ಅಮೆರಿಕ ದೇಶಗಳಲ್ಲಿ ತೆರಿಗೆಯನ್ನು ವಸೂಲು ಮಾಡತಕ್ಕ ರೀತಿಯಲ್ಲಿ ಬಲಾತ್ಕಾರವಿರುವುದಿಲ್ಲ, ಜಫ್ತಿ ಮುಂತಾದ್ದು ನಡೆಯುವುದಕ್ಕೆ ಅವಕಾಶವಿರುವುದಿಲ್ಲ. ಅವರು voluntary ಯಾಗಿ ಸ್ವತಃ ಕೊಡುವ ಪದ್ಧತಿ ಇದೆ ಎಂದು ತಿಳಿಯುತ್ತೇನೆ. ಅಂಥ ಪದ್ಧತಿ ಇಲ್ಲಿಯೂ ಜಾರಿಗೆ ಬರಬೇಕು. ಹೆಚ್ಚಿನ ಜನರಿಗೆ ಅರಿವು ಬಂದು ಜನ ಜಾಗ್ರುತಿ ಹೆಚ್ಚಾಗಬೇಕು. ಈ ಸಂದರ್ಭದಲ್ಲಿ ನನ್ನ ಒಂದು ಸೂಚನೆ ಎಂದರೆ ಸ್ವಂತವಾಗಿ ಸಣ್ಣಪುಟ್ಟ ಮನೆಗಳಲ್ಲಿ ವಾಸಮಾಡುವಂಥಾ ಜನರಿಗೆ ಆಸ್ತಿ ತೆರಿಗೆಯಿಂದ ವಿನಾಯಿತಿ ಪಡಿಸುವುದು ಉತ್ತಮ. ಮದ್ರಾಸಿನಲ್ಲಿ ಬ್ರಿಟಿಷರು 1920ನೆಯ ಇಸವಿಯಲ್ಲಿ ಕಾಯಿದೆ ರಚಿಸುವಾಗ ತಿಂಗಳಿಗೆ ಒಂದೂವರೆ ರೂಪಾಯಿ ಎಂದರೆ ವಾರ್ಷಿಕ ವರಮಾನ 18 ರೂಪಾಯಿ ಬರುವಂಥ ಮನೆಗಳಿಗೆಲ್ಲ, ಸ್ವಂತವಾಸವಿದ್ದ ಮನೆಗಳಿಗೆ ವಿನಾಯಿತಿಯನ್ನು ಕೊಟ್ಟಿದ್ದರು. ಆ ಕಾಲದಲ್ಲಿ 18 ರೂಪಾಯಿ ಎಂದರೆ ಈಗಿನ ಕಾಲದಲ್ಲಿ 400-500 ರೂಪಾಯಿ ನಷ್ಟಾಗುತ್ತದೆ. ಆದ್ದರಿಂದ ತಿಂಗಳಿಗೆ 30-40 ರೂಪಾಯಿ ಬಾಡಿಗೆ ಬರುವಂಥ ಸಾಮಾನ್ಯ ಮನೆಗಳಿಗೆ ಸ್ವಂತವಾಗಿ ವಾಸ ಮಾಡುವಂಥ ಮನೆಗಳಿಗೆ, ಅದಷ್ಟುಮಟ್ಟಿಗೂ ಸರ್ಕಾರ ವಿನಾಯಿತಿಯನ್ನು ಕೊಡಿಸುವುದಕ್ಕೆ ಈ ಕಾಯಿದೆಯಲ್ಲಿ ಅವಕಾಶವನ್ನು ಕಲ್ಪಿಸಿದರ ಉತ್ತಮವಾದೀತು, ಕಾರಣ ಏನಾದರೂ ಪರಿಣಾಮವಾಗಿ ಉದ್ಯೋಗವನ್ನು ಕಳೆದುಕೊಂಡರೆ ಅವನಿಗೆ ಸಂಪಾದನೆಯಿಲ್ಲದೆ ಮನೆಯನ್ನೂ ಮಾರಿ ತೆರಿಗೆಯನ್ನು ಕಟ್ಟುವಂಥ ಪರಿಸ್ಥಿತಿ ಬರಬಾರದು. ಅಥವಾ ಮನೆಯ ಯಜಮಾನನಾದವನು ತೀರಿಕೊಂಡರೆ ಅವನ ಹೆಂಡತಿ ಮಕ್ಕಳು ಅಬಲರಾಗಿರುವುದರಿಂದ ತೆರಿಗೆಯನ್ನು ಕಟ್ಟಬೇಕಾದರೆ ಮನೆಯನ್ನು ಮಾರಾಟ ಮಾಡಬೇಕು ಇಲ್ಲವೇ ಮನೆಯನ್ನು ಬಾಡಿಗೆಗೆ ಕೊಟ್ಟು, ಮನೆಗಾಗಿ ತೊಂದರೆ ಪಡಬೇಕಾಗುತ್ತದೆ. ಇಂಥ ಕುಟುಂಬಗಳು ಎಷ್ಟೋ ಇವೆ. ಈ ಕುಟುಂಬಗಳ ಕಡೆಗೆ ಗಮನವಿಟ್ಟು ವಾರ್ಷಿಕ ಆದಾಯ, rental value 400-500 ರೂಪಾಯಿನಷ್ಟು ಬರತಕ್ಕ ಮನೆಗಳಿಗೆ ಸ್ವಂತ ವಾಸದ ಮನೆಗಳಿಗೆ ಪೂರ್ತಿ ವಿನಾಯಿತಿ ಕೊಡಿಸಲು ಬೇಕಾದ ಅವಕಾಶವನ್ನು ಇದರಲ್ಲಿ ಸೇರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಉತ್ತಮ ಪಂಚಾಯಿತಿ ರಾಜ್ಯ ಎಂದು ಏನು ಹೇಳುತ್ತೇವೆಯೋ ಅದು ಪತ್ರಿಕೆಗಳಲ್ಲಿ ಅಥವಾ ಮಸೂದೆಯಲ್ಲಿ ಉಳಿದಿದೆ, ಕಾರ್ಯಗತವಾಗಿ ಉತ್ತಮರಾದ ಜನ ನಾಯಕರನ್ನು ಈ ರಾಜ್ಯಕ್ಕೆ ಒದಗಿಸುವ ಅವಕಾಶವನ್ನು ಈ ಮಸೂದೆಯಲ್ಲಿ ಕಲ್ಪಿಸುವಂತೆ ಇದನ್ನು ತಿದ್ದುಪಾಟು ಮಾಡುವ ಬಗ್ಗೆ ಸರ್ಕಾರದವರು ನನ್ನ ಮೇಲಿನ ಸೂಚನೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಲ್. ಗೌಡ (ಚಿಳ್ಳಕೆರೆ).—ಸ್ವಾಮಿ, ಮೊದಲನೆಯದಾಗಿ ಐದು ವಿವಿಧ ರೀತಿಯ ಕಾನೂನುಗಳಿಂದ ಕೂಡಿದ ಪುರಸಭೆಗಳ ಆಡಳಿತಕ್ಕೆ ಸಂಬಂಧಪಟ್ಟ ಮಸೂದೆಯನ್ನು ಒಂದುಗೂಡಿಸಿ ಸಮಗ್ರವಾದ ಮಸೂದೆಯನ್ನು ತಂದಿರುವುದಕ್ಕಾಗಿ ಮಾನ್ಯ ಪೌರಾಡಳಿತದ ಸಚಿವರನ್ನು ಅಭಿನಂದಿಸುತ್ತೇನೆ.

ಸ್ವಾಮಿ, 13ನೆಯ ಅಧ್ಯಾಯದಲ್ಲಿ ಕಂಟ್ರೋಲ್ ಎಂಬ ಬಗ್ಗೆ ಮಾತ್ರ ಒಂದೆರಡು ಮಾತ ನಾಡಬಯಸುತ್ತೇನೆ. ಇದುವರೆಗೂ ಪೌರಾಡಳಿತದಲ್ಲಿ ಸರ್ಕಾರ ಎಷ್ಟರಮಟ್ಟಿಗೆ ತಲೆಹಾಕಿ ಅನಾವಶ್ಯಕವಾಗಿ ಪುರಸಭೆಯ ಸಾರ್ವಭೌಮತ್ವದಲ್ಲಿ ಕುಂದುಕ ತರುತ್ತಿದೆ ಎಂದು ನಾನು ಬಹಳ ವಿಷಾದದಿಂದ ಈ ಸಭೆಯ ಗಮನಕ್ಕೆ ತರಬೇಕಾಗಿದೆ.

ಈ ಕಾನೂನಿನ 300ನೆಯ ಕ್ಲಾಜಿನಲ್ಲಿ ಈ ಸರ್ಕಾರದವರು ಪೌರಾಡಳಿತ ಅವರ ಭಾವನೆ ಪ್ರಕಾರ ಕೆಟ್ಟುಹೋಗಿದ್ದರೆ, ಅಥವಾ ಅಧಿಕಾರ ದುರುಪಯೋಗವಾಗಿದ್ದರೆ, ಅಂಥ ಸಂದರ್ಭಗಳಲ್ಲಿ ಒಬ್ಬ executive ಆಫೀಸರನ್ನು ನೇಮಕ ಮಾಡಬಹುದು ಅಥವಾ ಪೌರಸಭೆಯನ್ನು supersede ಮಾಡಬಹುದು ಎಂದು ಅಧಿಕಾರವನ್ನಿಟ್ಟುಕೊಂಡಿದ್ದಾರೆ. ಈ ಅಧಿಕಾರ ಎಷ್ಟು ವಿಶಾಲವಾಗಿದೆ ಎಂದು ಹೇಳಿದರೆ ಯಾವ ಒಂದು ಕಾರಣವೂ ಇಲ್ಲದೆ abuse of power ಎಂದು ಹೇಳಿ ಅದನ್ನು ಸರ್ಕಾರ ವಶಪಡಿಸಿಕೊಳ್ಳಬಹುದು. Supersede ಮಾಡಬಹುದು. ತಮಗೆ ಬೇಕಾದವರು ಆ ಮುನಿಸಿಪಾಲಿಟಿಯಲ್ಲಿಲ್ಲದೆ ಹೋದರೆ ಆಡಳಿತ ಪಕ್ಷಕ್ಕೆ ಸೇರಿದವರಿಲ್ಲದೆ ವಿರೋಧಪಕ್ಷದವರಿದ್ದರೆ, ಅಂಥ ಸಂದರ್ಭಗಳಲ್ಲಿ supersede ಮಾಡುವುದಕ್ಕೆ ಅವರಿಗೆ ಅಧಿಕಾರ ಬರುವಂಥ ಶಬ್ದಗಳನ್ನು ಉಪಯೋಗಿಸಿದ್ದಾರೆ.

Sri K. PUTTASWAMY.—Abuse of power that is a justiciable matter. Supposing I hold a municipality as having abused its power. Whether they have done so is a matter on which they can as well go to court and get it set aside.

12-30 P.M.

Sri B. L. GOWDA.—Why should he go to court?

> "300; (1) (a); If in the opinion of the Government a municipal council is not competent to perform the duties imposed on it or undertaken by it by or under this Act or any other law and the Government considers that a general improvement in the administration of the municipality is likely to be secured by the appointment of an officer of the Government as an Executive officer of the municipal council or the Government may by an order stating the reasons therefor published in the official gazette appoint an officer of the Government appoint an executive officer of the municipal council for such period not exceeding two years......"

ಒಂದು ಮುನಿಸಿಪಾಲಿಟಿಗೆ ಸಾಮಾನ್ಯವಾಗಿ ಸೇವೆ ಮಾಡತಕ್ಕ ಮನೋಭಾವನೆಯುಳ್ಳವರು ಚುನಾಯಿತರಾಗಿ ಬರುತ್ತಾರೆ. ಸೆಕ್ಷನ್ 89-90ರಲ್ಲಿ ಮುನಿಸಿಪಾಲಿಟಿಯವರು ಇಂತಿಂಥ ಕೆಲಸ ಮಾಡಬೇಕೆಂದು ನೇಮಕ ಮಾಡಿದ್ದಾರೆ. ನೀರು ಇರಬೇಕು, ದೀಪ ಇರಬೇಕು, ಎಲ್ಲ ಚೊಕ್ಕಟ ವಾಗಿಟ್ಟಿರಬೇಕು ಎಂದು ಹೇಳಿದ್ದಾರೆ. ಇಂಥ ಯಾವ ಕಾರ್ಯಗಳನ್ನೂ ಮಾಡದೆ ಹೋದರೆ ಅದಕ್ಕೆ ಸೆಕ್ಷನ್ 289, 291 ಮತ್ತು 292ರಲ್ಲಿ ಮತ್ತು ನಾನಾ ಸೆಕ್ಷನ್‌ಗಳಲ್ಲಿ ಅಧಿಕಾರವಿಟ್ಟುಕೊಂಡಿದ್ದಾರೆ. ಇದಲ್ಲದೆ ಮುನಿಸಿಪಾಲಿಟಿಯನ್ನು ವಜಾ ಮಾಡಿ ಸರ್ಕಾರದ ವಶದಲ್ಲಿಟ್ಟುಕೊಳ್ಳುವಂಥ ಪ್ರಮುಖ್ಯ ಕಾರಣವೇನಿದೆ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಈಗಾಗಲೇ ಕೆಲವು ವಿಷಯ ಗಳು ನಮ್ಮ ಅನುಭವಕ್ಕೆ ಬಂದಿವೆ. ನಮ್ಮ ಮೈಸೂರು ರಾಜ್ಯದ ಕಲ್ಯಾಣ ನಗರಿಯಾದ ದಾವಣಗೆರೆ ಒಂದು ಸಿಟಿ ಮುನಿಸಿಪಾಲಿಟಿ. ಅಲ್ಲಿ ವಿರೋಧ ಪಕ್ಷಕ್ಕೆ ಸಂಬಂಧಪಟ್ಟವರು ಅಧಿಕಾರ ವರ್ಗದಲ್ಲಿದ್ದಾರೆ. ಅವರು ಬಂದು ಸುಮಾರು ಎರಡೂವರೆ ವರ್ಷವಾಗಿದೆ. ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅಂಕಿ ಅಂಶಗಳ ಪ್ರಕಾರ ನಾನು ಹೇಳಬೇಕಾದರೆ, ಅವರು ಮುನಿಸಿಪಲ್ ಆಕ್ಟ್ರಾಯಿ ವಸೂಲ್ಮಾಡುವುದರಲ್ಲಿ ಬಹಳ ನಿಷ್ಪಕ್ಷಪಾತವಾಗಿ ಚೆನ್ನಾಗಿ ಕೆಲಸ ಮಾಡಿದ್ದಾರೆ.

ಸಾಲಿಯಾನ ಒಂದೆರಡು ಲಕ್ಷ ರೂಪಾಯಿ ವಸೂಲ್ಮಾಡುತ್ತಿದ್ದಾರೆ. ಯಾರ ಮುಲಾಜೂ ಇಲ್ಲದೆ ವಸೂಲ್ಮಾಡುತ್ತಿದ್ದಾರೆ. ಹೀಗಿದ್ದರೂ ನಿಮ್ಮನ್ನು ಏಕೆ supersede ಮಾಡಬಾರದೆಂದು ಮುನಿಸಿಪಾಲಿಟಿಯವರಿಗೆ show cause notice ಕೊಟ್ಟಿದ್ದಾರೆ. ಇದೂ ಅಲ್ಲದೆ ದಿನನಿತ್ಯದ ಕಾರ್ಯಗಳಲ್ಲಿ ತೊಂದರೆ ಕೊಡುತ್ತಿದ್ದಾರೆ. ಅಲ್ಲಿ underground drainage ಹಾಕಲು ಸರ್ಕಾರ ಒಪ್ಪಿಗೆಯನ್ನು ಕೊಟ್ಟಿದೆ. ಅದರೆ ಅವನ್ನು ಇನ್ನೂ ಕಾರ್ಯಗತ ಮಾಡಿಲ್ಲ. ಈ ರೀತಿಯಲ್ಲಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಅವಕಾಶವನ್ನು ಇದರಲ್ಲಿ ತಪ್ಪಿಸಬೇಕು ಎಂದು ಈ ಸಭೆಯ ಮತ್ತು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಈ ಸರ್ಕಾರ ಆಡಳಿತದಲ್ಲಿ ಎಷ್ಟರಮಟ್ಟಿಗೆ interfere ಆಗುತ್ತದೆಂದರೆ ಹರಿಹರ ಮುನಿಸಿಪಾಲಿಟಿಯಲ್ಲಿ ಹಿಂದಿನ ಮುನಿಸಿಪಲ್ ಅಧ್ಯಕ್ಷರು ಹತ್ತು ಸಾವಿರ ರೂಪಾಯಿಗಳಿಗೆ ಒಂದು ನಿವೇಶನವನ್ನು ಒಬ್ಬ ವ್ಯಕ್ತಿಗೆ ಕೊಟ್ಟಿದ್ದರು. ಬೇರೆಯವರು ಮುಂದೆ ಅಲ್ಲಿ ಸಂಪೂರ್ಣವಾಗಿ ಅಧಿಕಾರದ ದುರುಪಯೋಗವಾಗಿದೆ, ತಪ್ಪು ಮಾಡಿದ್ದಾರೆ ಆ ನಿವೇಶನಕ್ಕೆ 15 ಸಾವಿರ ರೂಪಾಯಿ ಕೊಡುತ್ತೇವೆಂದು ಸ್ವಲ್ಪ ಹಣವನ್ನು ಕೊಟ್ಟು ದುಸರ ಹರಾಜಿಗೆ ಆರ್ಡರ್ ಮಾಡಿ ಎಂದರೆ ಸರ್ಕಾರದವರು ಹತ್ತು ಸಾವಿರ ರೂಪಾಯಿಗಳಿಗೆ ಕೊಟ್ಟಿರುವುದನ್ನೇ ಖಾಯಂ ಮಾಡಿದ್ದಾರೆ. ಮುನಿಸಿಪಾಲಿಟಿಗೆ ಬರತಕ್ಕ ಹಣವನ್ನು, ಬರತಕ್ಕ ಆದಾಯವನ್ನು ಕೂಡ ಕಡಮೆ ಮಾಡಿದ್ದಾರೆ. ಇದೇ ರೀತಿ ಗದಗ್ ಬೆಟಗೇರಿ ಮುನಿಸಿಪಾಲಿಟಿಗಳ ವ್ಯವಹಾರ ಹೈಕೋರ್ಟಿನವರೆಗೂ ಹೋಗುವವರೆಗೆ ಬಂದಿದೆ. ಇವನ್ನೆಲ್ಲಾ ಪರಿಶೀಲಿಸಿ ಕಾನೂನಿನ ಸೆಕ್ಷನ್ನು 89-90ರಲ್ಲಿರುವ obligators, functionsನ್ನು ಸರಿಯಾಗಿ ನೋಡಿಕೊಳ್ಳದೇ ಹೋಗುತ್ತಿರುವುದರಿಂದ ಆಗುತ್ತದೆ ಇದಕ್ಕೆ ಸರಿಯಾಗಿ ಅವಕಾಶ ಮಾಡಿಕೊಡಬೇಕು.

Mr. DEPUTY SPEAKER.—The House will now rise and meet again at 1 P. M. on Monday, the 8th April 1963.

The House adjourned at Forty Minutes past Twelve of the Clock to meet again at One of the Clock on Monday, the 8th April 1963.

WD 409—GPB—900—20—9—63.